# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 07, 2021

ಸಂಪುಟ : 47 ಸಂಚಿಕೆ : 248 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಮೀಸಲಾತಿಗಾಗಿ ಪಂಚಮಸಾಲಿ, ಕುರುಬರ ಕೂಗು

**ರಾಜ್ಯದ ಎರಡು ಪ್ರಮುಖ ಸಮುದಾಯಗಳಾದ ಪಂಚಮಸಾಲಿ ಹಾಗೂ ಕುರುಬ ಸಮುದಾಯ ಮೀಸಲಾತಿಗಾಗಿ ಹೋರಾಟ ಆರಂಭಿಸಿದ್ದು, ಪೂರ್ವಭಾವಿ ಸಮಾವೇಶಗಳಿಗೆ ದಾವಣಗೆರೆ ಜಿಲ್ಲೆ ಬುಧವಾರ ಸಾಕ್ಷಿಯಾಯಿತು. ಎರಡೂ ಸಮುದಾಯಗಳು ಮೀಸಲಾತಿ ಪಡೆದೇ ತೀರುವ ಪಣ ತೊಟ್ಟವು.**

## ಶಿಕ್ಷಣ, ಸಬ್ಸಿಡಿ, ಸೌಲಭ್ಯಗಳಿಗಾಗಿ ಎಸ್‌ಟಿ ಸ್ಥಾನಮಾನ

### ನಗರದಲ್ಲಿ ನಡೆದ ಜಾಗೃತಿ ಸಮಾವೇಶದಲ್ಲಿ ಮೀಸಲಾತಿಗಾಗಿ ಕುರುಬರ ಕೂಗು



ದಾವಣಗೆರೆ, ಜ. 6 – ಕುರುಬ ಸಮಾಜದ ಮಕ್ಕಳ ಶಿಕ್ಷಣ, ಆರ್ಥಿಕತೆ ಹಾಗೂ ಸಾಮಾಜಿಕ ಸಮಾನತೆಗಾಗಿ ಎಸ್.ಟಿ. ಮೀಸಲಾತಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಲ್ಪಿಸಬೇಕು. ಇಲ್ಲದಿದ್ದರೆ ದೆಹಲಿಯವರೆಗೆ ಹೋರಾಟ ನಡೆಸಲಾಗುವುದು ಎಂದು ನಗರದಲ್ಲಿ ಇಂದು ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಸಂದೇಶ ನೀಡಲಾಗಿದೆ.

ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಎಸ್.ಟಿ. ಮೀಸಲಾತಿಗಾಗಿ ಬೆಂಗಳೂರಿಗೆ ಕೈಗೊಳ್ಳುತ್ತಿರುವ ಪಾದಯಾತ್ರೆಯ ಅಂಗವಾಗಿ ನಗರದ ಶ್ರೀ ಬೀರೇಶ್ವರ ದೇವಸ್ಥಾನದ ಮೈದಾನದಲ್ಲಿ ಆಯೋಜಿಸಲಾಗಿದ್ದ ಜಾಗೃತಿ ಸಮಾವೇಶದಲ್ಲಿ ಸಹಸ್ರಾರು ಜನರು ಮೀಸಲಾತಿ ಬೇಡಿಕೆಯ ಘೋಷಣೆಗೆ ಸಾಕ್ಷಿಯಾದರು.

ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಸಚಿವ ಕೆ.ಎಸ್. ಈಶ್ವರಪ್ಪ, ಉಚಿತ ಶಿಕ್ಷಣದಿಂದ ಹಿಡಿದು, ಬ್ಯಾಂಕ್ ಸಾಲ ಸಬ್ಸಿಡಿ, ವಸತಿ ಸಬ್ಸಿಡಿ, ರಾಜಕೀಯ ಮೀಸಲಾತಿಯಿಂದ ಹಿಡಿದು ಉಚಿತ ಜಮೀನಿನವರೆಗೆ ಹತ್ತು ಹಲವು ಸೌಲಭ್ಯಗಳಿಗಾಗಿ ಕುರುಬ ಸಮುದಾಯ ಎಸ್.ಟಿ. ಮೀಸಲಾತಿಗೆ ಹೋರಾಟ ನಡೆಸಬೇಕಿದೆ ಎಂದು ಕರೆ ನೀಡಿದರು.

ಎಸ್.ಟಿ. ಸ್ಥಾನಮಾನ ದೊರೆತರೆ ರಾಜ್ಯ ಸರ್ಕಾರ ಕುರುಬರ ಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ಸೌಲಭ್ಯ ಕಲ್ಪಿಸಲಿದೆ. ವೈದ್ಯಕೀಯ ಹಾಗೂ ಇಂಜಿನಿಯರಿಂಗ್‌ನಂತಹ ಸೀಟುಗಳೂ ಖರ್ಚಿಲ್ಲದೇ ಸಿಗುತ್ತವೆ. ಐದು ಎಕರೆವರೆಗಿನ ಜಮೀನು ಉಚಿತವಾಗಿ ಸಿಗುತ್ತದೆ. ವಸತಿ ಸೌಲಭ್ಯ, ಬ್ಯಾಂಕ್ ಸಾಲದಿಂದ ಹಿಡಿದು ಎಲ್ಲೆಡೆ ಸಬ್ಸಿಡಿ ಸಿಗುತ್ತದೆ ಎಂದವರು ಹೇಳಿದರು.

ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗಳಲ್ಲಿ ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಿದ್ದಾರೆ. ಮೀಸಲಾತಿಯಿಂದಾಗಿ ಕುರುಬರು ವಿಧಾನಸೌಧಕ್ಕೂ (4ನೇ ಪುಟಕ್ಕೆ)

**ಕುರುಬರಿಗೆ 2ಎನಲ್ಲಿ ಸರ್ಕಾರಿ ಹುದ್ದೆ ಮೀಸಲಾತಿ ಮಾತ್ರ ಸಿಗುತ್ತಿದೆ. ಶೈಕ್ಷಣಿಕ ಹಾಗೂ ಆರ್ಥಿಕ ಸೌಲಭ್ಯಗಳು ಸಿಗುತ್ತಿಲ್ಲ. ಈಗಾಗಲೇ 104 ಜಾತಿಗಳು 2ಎ ಮೀಸಲಾತಿಯಲ್ಲಿದ್ದು, ಇನ್ನಷ್ಟು ಜಾತಿಯವರು ಸೇರಲು ಬಯಸುತ್ತಿದ್ದಾರೆ. ಹೀಗಾಗಿ ಕುರುಬರಿಗೆ ಎಸ್.ಟಿ. ಮೀಸಲಾತಿ ಬೇಕಿದೆ.**

**-ಕೆ. ವಿರುಪಾಕ್ಷಪ್ಪ, ಎಸ್.ಟಿ. ಹೋರಾಟ ಸಮಿತಿ ರಾಜ್ಯಾಧ್ಯಕ್ಷ**

**ಸಮಾಜ ನಡೆಸುತ್ತಿರುವ ಹೋರಾಟದಲ್ಲಿ ಅವರು ಕರೆದಿಲ್ಲ, ಇವರು ಬಂದಿಲ್ಲ ಎಂಬುದು ಲೆಕ್ಕಕ್ಕಿಲ್ಲ. ಬೆಂಗಳೂರಿನ ಹೋರಾಟದ ನಂತರವೂ ಮೀಸಲಾತಿ ಕೊಡದಿದ್ದರೆ ದೆಹಲಿಗೆ ತೆರಳಿ ಡೊಳ್ಳು ಬಾರಿಸಿ ಕೇಂದ್ರ ಸರ್ಕಾರದ ಕಿವಿ ತೆರೆಸುತ್ತೇವೆ.**

**- ಶ್ರೀ ಈಶ್ವರಾನಂದಪುರಿ ಸ್ವಾಮೀಜಿ,**

**ಹಳ್ಳಿ ಹಳ್ಳಿಗಳಲ್ಲಿ ಕುರುಬ ಸಮುದಾಯದವರಲ್ಲಿದ್ದ ಒಡಕು ಮೀಸಲಾತಿ ಹೋರಾಟದ ಕಾರಣದಿಂದಾಗಿ ನಿವಾರಣೆಯಾಗಿವೆ. ಕಟ್ಟ ಕಡೆಯ ಕುರುಬರಿಗೆ ಸೌಲಭ್ಯ ಸಿಗಲೆಂದು ಸಮಾವೇಶ ನಡೆಸಲಾಗುತ್ತಿದೆ. ನಾವು ಗಟ್ಟಿಯಾಗಿ ಕೂಗಿದರೆ ಸಚಿವ ಈಶ್ವರಪ್ಪ ಅವರು ಬಲವಾಗಿ ಮೀಸಲಾತಿ ಕೇಳಲು ಸಾಧ್ಯವಾಗುತ್ತದೆ.**

**- ರಾಜನಹಳ್ಳಿ ಶಿವಕುಮಾರ್, ದೂಡಾ ಅಧ್ಯಕ್ಷ**

## ಕ್ರಾಂತಿಯುತ ಹೋರಾಟ ನಡೆದರೆ ಸರ್ಕಾರವೇ ಹೊಣೆ

### ಜ.14ರ ಪಾದಯಾತ್ರೆ ಒಳಗಾಗಿ ಸಿಎಂ ಕೊಟ್ಟ ಮಾತಿನಂತೆ ನಡೆಯಲಿ: ಕೂಡಲ ಸಂಗಮ ಶ್ರೀ

ದಾವಣಗೆರೆ, ಜ.6- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ವಿಚಾರದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇದೇ ದಿನಾಂಕ 14ರ ಪಾದಯಾತ್ರೆ ಒಳಗಾಗಿ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು. ಇಲ್ಲವಾದರೆ ಪಾದಯಾತ್ರೆ ವೇಳೆ ಸಮಾಜದ ಯುವಜನರು ಕ್ರಾಂತಿಯುತ ಹೋರಾಟಕ್ಕೆ ಇಳಿದರೆ, ಮುಂದಿನ ಅನಾಹುತಗಳಿಗೆ ಸರ್ಕಾರವೇ ಹೊಣೆಯೇ ಹೊರತು ನಮ್ಮ ಸಮಾಜವಲ್ಲ ಎಂದು ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮುನ್ನೆಚ್ಚರಿಕೆ ನೀಡಿದರು.

ಇಂದಿಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರ ನಿವಾಸದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಶ್ರೀಗಳು ಮಾತನಾಡುತ್ತಾ, ಈ ಹಿಂದೆ ಬೆಳಗಾವಿಯಲ್ಲಿ ಮೀಸಲಾತಿಗಾಗಿ ಉಪವಾಸ ಸತ್ಯಾಗ್ರಹ ನಡೆಸಿದ ಸಂದರ್ಭದಲ್ಲಿ ಸ್ವತಃ ಸಿಎಂ ಯಡಿಯೂರಪ್ಪ ನಮಗೆ ದೂರವಾಣಿ ಮೂಲಕ ಸಂಪರ್ಕಿಸಿ, ಮೀಸಲಾತಿ ಕಲ್ಪಿಸುವುದಾಗಿ ಭರವಸೆ ನೀಡಿದ್ದರು. ಒಂದು ತಿಂಗಳ ಗಡುವು ಮುಗಿದರೂ ಸಹ ಮೀಸಲಾತಿ ವಿಚಾರದಲ್ಲಿ ಯಾವುದೇ ನಿರ್ಣಯ ಕೈಗೊಂಡಿಲ್ಲ ಎಂದು ತಿಳಿಸಿದರು.

ನಮ್ಮವರೇ ಮುಖ್ಯಮಂತ್ರಿಗಳಿರುವಾಗ ಸಮಾಜಕ್ಕೆ ಮೀಸಲಾತಿ ದೊರಕಲಿದೆ ಎಂಬ ವಿಶ್ವಾಸವಿದೆ. ಮುಖ್ಯಮಂತ್ರಿಗಳು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಅವರ ಮೇಲೆ ಒತ್ತಡ ಹಾಕಲು ಜಾಗೃತಿ ಸಮಾವೇಶಗಳನ್ನು ಆಯೋಜಿಸುತ್ತಿದ್ದೇವೆ. ಜ.14ರಂದು ಕೂಡಲ ಸಂಗಮದ ಲಿಂಗಾಯತರ ಧಾರ್ಮಿಕ ಪೀಠದಿಂದ (2ನೇ ಪುಟಕ್ಕೆ)



ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹಮ್ಮಿಕೊಂಡಿರುವ ಪಂಚ ಲಕ್ಷ ಹೆಜ್ಜೆಗಳ ಪಾದಯಾತ್ರೆಯ ಪೂರ್ವಭಾವಿ ಸಮಾವೇಶವು ಮಾಜಿ ಮುಖ್ಯಮಂತ್ರಿ ದಿ.ಜೆ.ಹೆಚ್. ಪಟೇಲ್ ಅವರ ಜನ್ಮಭೂಮಿ, ತಾಲ್ಲೂಕಿನ ಕಾರಿಗನೂರು ಕ್ರಾಸ್ ಬಳಿ ಬುಧವಾರ ನಡೆಯಿತು.

## ಗಾಂಧೀಜಿ, ಅಂಬೇಡ್ಕರ್ ಹೆಸರಿನಲ್ಲಿ ವಂಚಿಸುವ ಕಾಂಗ್ರೆಸ್

### ಬಿಜೆಪಿ ಎಸ್.ಸಿ. ಮೋರ್ಚಾ ಕಾರ್ಯಕಾರಿಣಿಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರೋಪ



ದಾವಣಗೆರೆ, ಜ.6- ಮಹಾತ್ಮ ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ಹೆಸರೇಳಿಕೊಂಡು ಬೆಂಕಿ ಹಚ್ಚಲು ಯತ್ನಿಸುತ್ತಿರುವ ಕಾಂಗ್ರೆಸ್ ನಿಂದ ದೇಶವನ್ನು ರಕ್ಷಿಸಬೇಕಿದೆ ಎಂದು ಬಿಜೆಪಿ ಎಸ್.ಸಿ. ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಹೇಳಿದರು.

ನಗರದ ಸೋಮೇಶ್ವರ ವಿದ್ಯಾಲಯದಲ್ಲಿ ಇಂದು ಏರ್ಪಾಡಾಗಿದ್ದ ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಕಹಳೆ ಊದುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ತನ್ನ ಆಡಳಿತಾವಧಿಯಲ್ಲಿ ರಾಷ್ಟ್ರಭಕ್ತ ಅಂಬೇಡ್ಕರ್ ಅವರಿಗೆ ಸತತ ಆರು ಬಾರಿ (3ನೇ ಪುಟಕ್ಕೆ)

## ಯಡಿಯೂರಪ್ಪಗೆ ಮತ್ತೆ ಭೂ ಕಂಟಕ

### ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಹೈಕೋರ್ಟ್ ಅನುಮತಿ



ಬೆಂಗಳೂರು, ಜ. 6 – ಜಮೀನು ಅನುಮತಿ ವಾಪಸ್ ಪಡೆಯುವುದಕ್ಕೆ ಸಂಬಂಧಿಸಿದಂತೆ ಫೋರ್ಜರಿ ಮಾಡಿದ್ದಾರೆಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿದ್ದ ದೂರನ್ನು ಮತ್ತೆ ನೆಲೆಗೊಳಿಸಿರುವ ಹೈಕೋರ್ಟ್, 2015ರ ಡಿನೋಟಿಫಿಕೇಷನ್ ಅಕ್ರಮ ಆರೋಪದ ಎಫ್.ಐ.ಆರ್. ರದ್ದುಗೊಳಿಸಲು ನಿರಾಕರಿಸಿದೆ. ಇದರಿಂದಾಗಿ ಕಾನೂನು ಹೋರಾಟದಲ್ಲಿ ಯಡಿಯೂರಪ್ಪಗೆ ದುಪ್ಪಟ್ಟು ಹಿನ್ನಡೆಯಾಗಿದೆ.

ಯಡಿಯೂರಪ್ಪ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಪರಾಧಿಕ ಸಂಚು ಹಾಗೂ ದಾಖಲೆಗಳ ಫೋರ್ಜರಿ ನಡೆದಿದೆ ಎಂದು ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯಲ್ಲಿ ಆಲಂ ಪಾಶ ಎಂಬುವವರು ದೂರು ದಾಖಲಿಸಿದ್ದರು.

ಆಗ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ, ಮಾಜಿ ಸಚಿವ ಮುರುಗೇಶ್ ನಿರಾಣಿ, ಮಾಜಿ ಪ್ರಧಾನ ಕಾರ್ಯದರ್ಶಿ ವಿ.ಪಿ. ಬಳಿಗಾರ್ ಹಾಗೂ ಕರ್ನಾಟಕ ಉದ್ಯೋಗ ಮಿತ್ರದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ವಿರುದ್ಧ ಆರೋಪ ಮಾಡಲಾಗಿತ್ತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ತಮಗೆ ಮಂಜೂರಾಗಿದ್ದ 26 ಎಕರೆ ಜಮೀನು ವಾಪಸ್ ಪಡೆಯುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಫೋರ್ಜರಿ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು.

ಆದರೆ, ಪೂರ್ವಾನುಮತಿ ಪಡೆಯದೇ ದೂರು ದಾಖಲಿಸಲಾಗಿದೆ ಎಂದು 2013ರಲ್ಲಿ ಕೆಳ ನ್ಯಾಯಾಲಯ ಪ್ರಕರಣ ತಳ್ಳಿ ಹಾಕಿತ್ತು. 2014ರಲ್ಲಿ ಯಡಿಯೂರಪ್ಪ ಅಧಿಕಾರದಿಂದ ಕೆಳಗಿಳಿದ ನಂತರ ಮತ್ತೆ ದೂರು ದಾಖಲಿಸಲಾಗಿತ್ತು. ಆದರೆ, ಈ ದೂರನ್ನೂ ಸಹ ತಳ್ಳಿ ಹಾಕಲಾಗಿತ್ತು.

ದೂರು ತಳ್ಳಿ ಹಾಕಿದ್ದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು. ಈ ಮನವಿಯನ್ನು ಎತ್ತಿ ಹಿಡಿದಿರುವ ಹೈಕೋರ್ಟ್ ನ್ಯಾಯಮೂರ್ತಿ ಜಾನ್ ಮೈಖೆಲ್ ಕುನ್ಹ, 2014ರಲ್ಲಿ ಪ್ರತಿವಾದಿಗಳು ಅಧಿಕಾರದಲ್ಲಿ ಇರಲಿಲ್ಲ. ಹೀಗಾಗಿ ದೂರು ದಾಖಲಿಸಿದ್ದು ಸಿಂಧುವಾಗುತ್ತದೆ ಎಂದು ತಿಳಿಸಿದ್ದಾರೆ.

ಆದರೆ, ಬಳಿಗಾರ್ ವಿರುದ್ಧ ಪ್ರಕರಣ ದಾಖಲಿಸಲು ಸರ್ಕಾರ ಅನುಮತಿ ನೀಡಿರಲಿಲ್ಲ. ಹೀಗಾಗಿ ಅವರ ವಿಷಯದಲ್ಲಿ ಕೆಳ (3ನೇ ಪುಟಕ್ಕೆ)

## ವಚನ ವಿಶ್ವವಿದ್ಯಾನಿಲಯ ಸ್ಥಾಪನೆ, ಬಸವ ಉತ್ಸವಕ್ಕೂ ನಿರ್ಧಾರ

ಬೀದರ್, ಜ. 6 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನೂತನ ಅನುಭವ ಮಂಟಪ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದು, ಎರಡು ವರ್ಷಗಳಲ್ಲಿ ಅನುಭವ ಮಂಟಪ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಹಳೆಯ ಅನುಭವ ಮಂಟಪದ ಬಳಿಯೇ ನೂತನ ಅನುಭವ ಮಂಟಪ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಈ ವೇಳೆ ಮಾತನಾಡಿದ ಅವರು, ಇದು ಪೂರ್ವಜನ್ಮದ ಪುಣ್ಯ ಕಾರ್ಯ. ಅನುಭವ ಮಂಟಪ ನಿರ್ಮಾಣಕ್ಕೆ ಈಗಾಗಲೇ 100 ಕೋಟಿ ರೂ. ಬಿಡುಗಡೆ ಮಾಡಿದ್ದು, ಇನ್ನು 100 ಕೋಟಿ ರೂ.ಗಳನ್ನು ವಾರದೊಳಗೆ ಬಿಡುಗಡೆ ಮಾಡಿ, (2ನೇ ಪುಟಕ್ಕೆ)

## ಗೃಹಿಣಿಯರಿಗೂ ಸಾಂಕೇತಿಕ ಆದಾಯ

**ಪರಿಹಾರ ಪ್ರಕರಣಗಳಲ್ಲಿ ಗೃಹಿಣಿಯರ ಸೇವೆಗೆ ಮಾನ್ಯತೆ ನೀಡಿದ ಸುಪ್ರೀಂ ಕೋರ್ಟ್**

ಬೆಂಗಳೂರು, ಜ. 6 – ಪರಿಹಾರ ನಿರ್ಧರಿಸುವ ಪ್ರಕರಣಗಳಲ್ಲಿ ಮನೆ ನಿರ್ವಹಿಸುವವರಿಗೆ ಸಾಂಕೇತಿಕವಾಗಿ ಆದಾಯ ನಿಗದಿ ಪಡಿಸುವುದರಿಂದ ಅವರ ಪರಿಶ್ರಮ, ಸೇವೆ ಹಾಗೂ ತ್ಯಾಗಕ್ಕೆ ಸಮಾಜ ಬೆಲೆ ಕೊಡುತ್ತದೆ ಎಂಬ ಸಂಕೇತ ಸಿಗುತ್ತದೆ ಎಂದು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

ಸಮೀಕ್ಷೆಯೊಂದನ್ನು ಉದಾಹರಿಸಿರುವ ಸುಪ್ರೀಂ ಕೋರ್ಟ್, ಗೃಹಿಣಿಯರಾಗಿ ಸೇವೆ ಸಲ್ಲಿಸುವ ಮಹಿಳೆಯರ ಪರಿಶ್ರಮ ಪುರುಷರಿಗೆ ಹೋಲಿಸಿದರೆ ಬಹುತೇಕ ಬಾರಿ ಯಾವುದೇ ಆದಾಯ ತರುವುದಿಲ್ಲ ಎಂದು ಹೇಳಿದೆ. (4ನೇ ಪುಟಕ್ಕೆ)


ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ॥ ಸಣ್ಣಗೌಡ್ರು ಭೋಜರಾಜಪ್ಪನವರು

ನಿಧನ : 07.01.2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

- ಶ್ರೀಮತಿ ಸಣ್ಣಗೌಡ್ರ ಶಾಂತಮ್ಮ ಭೋಜರಾಜಪ್ಪ
- ಶ್ರೀಮತಿ ಶಿವಲೀಲಾ, ಶ್ರೀ ಸಣ್ಣಗೌಡ್ರ ಚಂದ್ರಶೇಖರಪ್ಪ ಮತ್ತು ಮಕ್ಕಳು
- ಶ್ರೀಮತಿ ಶೋಭ (ನವೀನ), ಶ್ರೀ ಪಿ. ದಿನೇಶ್
- ಶ್ರೀಮತಿ ರೇಖಾ, ಶ್ರೀ ಎಸ್.ಜಿ. ಬಸವರಾಜ್, ಕು. ಮಾನ್ವಿ, ಕು. ಅಮೃತ
- ಶ್ರೀಮತಿ ಶೈಲಜ, ಶ್ರೀ ಎಸ್.ಜಿ. ಮಂಜುನಾಥ್, ಚಿ. ಗೌತಮ್, ಕು. ಸಾನ್ವಿ

ಹಾಗೂ ಮೊಮ್ಮಕ್ಕಳು ಮತ್ತು ಸಣ್ಣಗೌಡ್ರ ವಂಶಸ್ಥರು, ಶಾಮನೂರು

ಅಮೃತ ಪೇಂಟ್ಸ್ ಅಂಡ್ ಹಾರ್ಡ್‌ವೇರ್
ಶಿವಶಕ್ತಿ ಹಾರ್ಡ್‌ವೇರ್ಸ್ ಅಂಡ್ ಪ್ಲೈವುಡ್ಸ್

Ph. : 7026074747, 8192232727, 7026072727

# ಒಗ್ಗಟ್ಟಿನಿಂದ ಮಾತ್ರ ಒಳ ಮೀಸಲಾತಿ ಸೌಲಭ್ಯ ಸಾಧ್ಯ

## ಹರಿಹರ : ಗ್ರಾ.ಪಂ. ನೂತನ ಸದಸ್ಯರಿಗೆ ಸನ್ಮಾನ ಸಮಾರಂಭದಲ್ಲಿ ಉಪಸಭಾಪತಿ ಡಾ. ಎಲ್. ಹನುಮಂತಯ್ಯ



ಹರಿಹರ, ಜ.6- ಮಾದಿಗ ಸಮಾಜದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಇದ್ದರೆ ಮಾತ್ರ ಒಳ ಮೀಸಲಾತಿ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿದೆ ಎಂದು ಉಪ ಸಭಾಪತಿ ಡಾ. ಎಲ್. ಹನುಮಂತಯ್ಯ ಹೇಳಿದರು.

ನಗರದ ಗುರುಭವನದಲ್ಲಿ ಮಾದಿಗ ಮೀ ಸಲಾತಿ ಹೋರಾಟ ಸಮಿತಿಯ ವತಿಯಿಂದ ಗ್ರಾಮ ಪಂಚಾಯಿತಿ ನೂತನ ಸದಸ್ಯರಿಗೆ ಸನ್ಮಾನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ, ಒಳ ಮೀಸಲಾತಿಗೆ ಮನವಿ, ಕಟ್ಟಡ ಕಾರ್ಮಿಕರ ಕಾರ್ಡ್ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜಕೀಯದಲ್ಲಿ ಮಾದಿಗ ಸಮಾಜದ ಶಾಸಕರು ಮತ್ತು ಸಂಸದರು ನೂರಕ್ಕಿಂತ ಹೆಚ್ಚು ಇದ್ದಾಗ ಒಳ ಮೀಸಲಾತಿ ಸೌಲಭ್ಯ ಕೇಳಲು ಶಕ್ತಿ ಬರುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಮೂವತ್ತು ಸಾವಿರ ಜನಸಂಖ್ಯೆ ಇದ್ದರೂ ಸಮಾಜದ ಕಾರ್ಯಕ್ರಮಕ್ಕೆ ಮೂರು ಸಾವಿರ ಜನರು ಬರುವುದಿಲ್ಲ ಎಂದರೆ ಸಮಾಜದಲ್ಲಿ ಒಗ್ಗಟ್ಟಿನ ಕೊರತೆ ಹೆಚ್ಚು ಇದೆ. ಯಾವುದೇ ಸರ್ಕಾರದಿಂದ ಸವಲತ್ತುಗಳನ್ನು ಪಡೆಯಲು ಹೋರಾಟವನ್ನು ಹಮ್ಮಿಕೊಳ್ಳದಿದ್ದರೆ, ಸೌಲಭ್ಯಗಳನ್ನು ಪಡೆಯಲು ಸಾಧ್ಯವಿಲ್ಲ.

ಹಿಂದೆ 68 ರಲ್ಲಿ ಮಾದಿಗ ಸಮಾಜದ ಶಾಸಕರು 25 ಕ್ಕೂ ಹೆಚ್ಚು ಸದಸ್ಯರು ಇದ್ದರು. ಆದರೆ ಈಗ 4 ಶಾಸಕರು ಇದ್ದಾರೆ ಮತ್ತು ಒಂದು ತಾಲ್ಲೂಕಿಗೆ ಒಬ್ಬರು ಜಿ.ಪಂ. ಸದಸ್ಯರು ಇದ್ದಾರೆ. ಪ್ರಜಾಪ್ರಭುತ್ವದಲ್ಲಿ ಮತದ ಶಕ್ತಿ ಯಾರಿಗೆ ಇರುತ್ತದೆ ಅವರಿಗೆ ಅವಕಾಶ ದೊರೆಯುತ್ತದೆ. ಯಾವ ಪಕ್ಷದವರು ನಿಮ್ಮ ಹಿತವನ್ನು ಕಾಪಾಡಲು ಮುಂದೆ ಬರುತ್ತಾರೋ ಮತ್ತು ಸಮಾಜವನ್ನು ಎಷ್ಟು ಅಭಿವೃದ್ಧಿ ಮಾಡುತ್ತಾರೋ ಅಂತಹ ಪಕ್ಷಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಮತವನ್ನು ಹಾಕಿ, ಅವರಿಂದ ಸೌಲಭ್ಯಗಳನ್ನು ಪಡೆಯುವಲ್ಲಿ ಯಶಸ್ಸು ಕಾಣಬೇಕು.

ಮಾದಿಗ ಸಮಾಜದವರು ಸಹ ಕುರುಬ ಸಮಾಜದ ಜನಾಂಗದವರಷ್ಟೇ ರಾಜ್ಯದಲ್ಲಿ ಇದ್ದಾರೆ. ಕುರುಬರಿಗೆ ಮೀಸಲಾತಿ ಪಡೆಯಲು ಶಕ್ತಿ ಇದೆ ಎಂದ ಮೇಲೆ ಮಾದಿಗ ಸಮಾಜಕ್ಕೆ ಯಾಕೆ ಇಲ್ಲ? ಎಂದು ಹೇಳಿದರು.

ಮೀಸಲಾತಿಯಿಂದ ಎಲ್ಲಾ ಸೌಲಭ್ಯಗಳು ದೊರೆಯುತ್ತವೆ ಎಂದು ಭಾವಿಸಬಾರದು. ಆದರೆ ಸಾವಿರ ಸಂಖ್ಯೆಯಲ್ಲಿನ ಉದ್ಯೋಗದ ಮೀಸಲಾತಿ ಸೌಲಭ್ಯದಿಂದ ಮಾದಿಗ ಸಮಾಜಕ್ಕೆ ಏಳು ನೂರು ಜನರಿಗೆ ದೊರೆಯುತ್ತದೆ ಎಂದು ಹೇಳಿದರು.

ಸಮಾರಂಭದ ಸಾನಿಧ್ಯ ವಹಿಸಿದ್ದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ ಸ್ವಾಮೀಜಿ ಮಾತನಾಡಿ, ಸಮಾಜದಿಂದ ಸೌಲಭ್ಯಗಳನ್ನು ಪಡೆದು ಮೇಲೆ ಬಂದಂತಹ ವ್ಯಕ್ತಿಗಳು ಸಮಾಜದ ಬೆಳವಣಿಗೆಯ ಕಡೆ ಗಮನ ಹರಿಸಬೇಕು. ಸಾಮಾಜಿಕ ಸ್ಪರ್ಧೆಯಲ್ಲಿ ಎಲ್ಲರೂ ಮುಂದೆ ಬರಬೇಕು ಎಂದು ಹೋದಾಗ ಮೀಸಲಾತಿ ಸೌಲಭ್ಯಗಳನ್ನು ಪಡೆಯುವುದು ಅವಶ್ಯಕತೆ ಇದೆ.

ಶಾಸಕ ಎಸ್. ರಾಮಪ್ಪ ಮಾತನಾಡಿ, ಮಾದಿಗ ಸಮಾಜದಲ್ಲಿ ಶೋಷಿತರು, ಬಡವರು ಹೆಚ್ಚಾಗಿ ಇರುವುದರಿಂದ ಮಾದಿಗ ಸಮಾಜಕ್ಕೆ ಒಳ ಮೀಸಲಾತಿ ಸೌಲಭ್ಯಗಳನ್ನು ನೀಡುವ ಅವಶ್ಯಕತೆ ಇದೆ. ಆದ್ದರಿಂದ ನಾನೂ ಅದಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಹೇಳಿದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದೇಶವು ಅಭಿವೃದ್ಧಿ ಹೊಂದಬೇ ಕಾದರೆ ಎಲ್ಲಾ ಸಮಾಜಗಳು ಸಹ ಮುಖ್ಯ ವಾಹಿನಿಗೆ ಬಂದಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಆದ್ದರಿಂದ ಮಾದಿಗ ಸಮಾಜಕ್ಕೆ ಒಳ ಮೀಸಲಾತಿ ನೀಡುವುದಕ್ಕೆ ನಾನು ಕೂಡ ಸಿಎಂ. ಯಡಿಯೂರಪ್ಪನವರ ಗಮನಕ್ಕೆ ತರುವುದಾಗಿ ಹೇಳಿದರು.

ಜಿಪಂ ಸದಸ್ಯ ಬಸವಂತಪ್ಪ ಮಾತನಾಡಿ, ಮಾದಿಗ ಸಮಾಜದ ಜನರನ್ನು ಬೇರೆ ಸಮಾಜದ ಜನರು ಹಾಳು ಮಾಡುತ್ತಿಲ್ಲ, ನಮ್ಮ ಸಮಾಜದಲ್ಲಿನ ಕೆಲವು ನ್ಯೂನತೆಗಳಿಂದ ಸಮಾಜದ ಸ್ವಾಭಿಮಾನಕ್ಕೆ ಧಕ್ಕೆ ಆಗುತ್ತಿದೆ. ಸಂಪಾದನೆ ಮಾಡಲು ಹೋರಾಟ ಮಾಡುವುದಕ್ಕೆ ಬರಬಾರದು ಸಮಾಜದ ಬಡವರಿಗೆ ನೆರವು ನೀಡುವುದಕ್ಕಾಗಿ ಹೋರಾಟಕ್ಕೆ ಬರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಪಂ ಅಧ್ಯಕ್ಷೆ ಶ್ರೀ ದೇವಿ ಮಂಜಪ್ಪ, ನಗರಸಭೆ ಸದಸ್ಯ ಹನು ಮಂತಪ್ಪ, ರಜನಿಕಾಂತ್, ಮುಖಂಡರಾದ ಎ.ಕೆ. ನಾಗಪ್ಪ, ಹನುಮಂತಪ್ಪ ವಕೀಲರು, ಎನ್.ಹೆಚ್. ಶ್ರೀನಿವಾಸ್, ಎಂ. ಹಾಲೇಶ್, ಭೂಮೇಶ್, ಆನಂದ್, ಹೆಚ್. ನಿಜಗುಣ, ಲಕ್ಷ್ಮಣ್, ಹೆಚ್. ಶಿವಪ್ಪ, ಸಾವಿತ್ರಮ್ಮ, ಕೃಷ್ಣಪ್ಪ, ಕೇಶವ ಹಾಗೂ ಇತರರು ಹಾಜರಿದ್ದರು.

## ಸಿಐಟಿಯುನಿಂದ ಇಂದು ಪ್ರತಿಭಟನೆ



**ಹರಿಹರ**

ಹರಿಹರ, 6- ಕೇಂದ್ರ ಸರ್ಕಾರದ ಜನ ವಿರೋಧಿ, ರೈತ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಹಾಗೂ ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಹತ್ತಿಕ್ಕಲು ಮೋದಿ ಸರ್ಕಾರದ ಆದೇಶದಂತೆ ನಡೆಯುತ್ತಿರುವ ಪೊಲೀಸ್ ದೌರ್ಜನ್ಯ ಹಾಗೂ ದಬ್ಬಾಳಿಕೆ ಖಂಡಿಸಿ ಸಿಐಟಿಯು ನೇತೃತ್ವದಲ್ಲಿ ನಾಳೆ ದಿನಾಂಕ 7 ರ ಗುರುವಾರ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಅವರಿಗೆ ಮನವಿ ಸಲ್ಲಿಸಲಾಗುತ್ತದೆ ಎಂದು ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು ತಿಳಿಸಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಿನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರವು ಜನರ ಹೋರಾಟವನ್ನು ಹತ್ತಿಕ್ಕಲು ಕೊರೊನಾ ವಿಪತ್ತು ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರದಂತೆ ಪ್ರತಿಬಂಧವನ್ನು ಹೇರಿ ಹಲವು ಕಾಯ್ದೆಗಳನ್ನು ಕಾರ್ಪೊರೇಟ್ ಕಂಪನಿಗಳ ಪರವಾಗಿ ಜಾರಿ ಮಾಡಿದೆ. ಅನ್ನದಾತನನ್ನು ಬೀದಿಗೆ ತಳ್ಳುವ ಭೂ ಸುಧಾರಣಾ ಕಾಯ್ದೆ ತಿದ್ದುಪಡಿಯಿಂದ ಕೃಷಿ ಜಮೀನನ್ನು ಹಣವುಳ್ಳ ಶ್ರೀಮಂತರು ಮತ್ತು ಕಪ್ಪುಹಣ ಹೊಂದಿರುವ ಖದೀಮರು ಕೊಂಡುಕೊಳ್ಳಲು ಕೇಂದ್ರ ಸರ್ಕಾರ ಅವಕಾಶ ಮಾಡಿಕೊಟ್ಟಿದ್ದು, ಕೃತಕ ಆಹಾರದ ಅಭಾವವನ್ನು ಸೃಷ್ಟಿಸಿ, ಆಹಾರ ಧಾನ್ಯಗಳ ಬೆಲೆ ಏರಿಕೆಗೆ ಕಾರಣವಾಗುತ್ತಿದೆ ಎಂದರು.

## ನಗರದ ದೊಡ್ಡಪೇಟೆಯಲ್ಲಿ ಇಂದು ವಿನಾಯಕ ಸ್ವಾಮಿ ಕಾರ್ತಿಕೋತ್ಸವ



ದೊಡ್ಡಪೇಟೆ ಶ್ರೀ ವಿನಾಯಕ ಸ್ವಾಮಿಯ ಕಡೇ ಕಾರ್ತಿಕ ಮಹೋತ್ಸವವನ್ನು ಇಂದು ರಾತ್ರಿ 9 ಗಂಟೆಗೆ ಏರ್ಪಡಿಸಲಾಗಿದೆ ಎಂದು ಶ್ರೀ ವಿನಾಯಕ ದೇವಸ್ಥಾನ ಸೇವಾ ಸಂಘ ಟ್ರಸ್ಟ್‌ನ ಎಸ್.ಬಿ. ನಿಜಗುಣ ಶಿವಯೋಗಿ ತಿಳಿಸಿದ್ದಾರೆ.

# ಶತಮಾನದ ಕನ್ನಡ ಕಾವ್ಯವಾಚನ ನಿತ್ಯೋತ್ಸವವು ವಿನೂತನವಾದುದು

**ಡಾ. ಬಸವ ಮರುಳಸಿದ್ದ ಸ್ವಾಮೀಜಿ ಶ್ಲಾಘನೆ**

ದಾವಣಗೆರೆ, ಜ.6- ಕನ್ನಡ ಸಾಹಿತ್ಯದಲ್ಲಿ ತಾನು ರಚನೆಯಾದ ಕಾಲಕ್ಕೇ ಸಂಸ್ಕೃತ, ಮಲೆಯಾಳಿ, ಮರಾಠಿ, ತಮಿಳು ಭಾಷೆಗಳಲ್ಲಿ ಭಾಷಾಂತರವಾದ ಮಹಾಕಾವ್ಯಗಳಲ್ಲಿ ಮೊದಲನೆಯ ಕೃತಿ ಚಾಮರಸ ಕವಿಯ ಪ್ರಭುಲಿಂಗಲೀಲೆ, ಹದಿನೈದನೆಯ ಶತಮಾನದಲ್ಲಿ ಬಸವ ಅಕ್ಕ ಅಲ್ಲಮರಾದಿಯಾಗಿ ಶಿವಶರಣರ ಕುರಿತು ರಚಿತವಾದ ಈ ಕೃತಿ ಒಂದು ಪ್ರಾಸಾಧಿಕವಾದ ಶೈಲಿ ಹಾಗೂ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ.

ಇದು ಈ ಕೃತಿಯ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ ಎಂದು ಶಿವಮೊಗ್ಗ ಬಸವ ಕೇಂದ್ರ ಹಾಗೂ ಚಿಕ್ಕಮಗಳೂರು ಬಸವ ಮಂದಿರದ ಶ್ರೀ ಡಾ. ಬಸವ ಮರುಳಸಿದ್ದ ಸ್ವಾಮೀಜಿ ತಿಳಿಸಿದರು.

ನಗರದ ಗ್ರಂಥ ಸರಸ್ವತಿ ಪ್ರತಿಭಾರಂಗವು ತನ್ನ ಕನ್ನಡಕಬ್ಬ ಉಗಾದಿ ಹಬ್ಬ ಕಾರ್ಯಕ್ರಮದಡಿ 2021 ರ ನೂತನ ವರ್ಷ ಜನವರಿ 1 ರಿಂದ ಡಿಸೆಂಬರ್ ವರ್ಷಾಂತ್ಯ 31 ರವರೆಗೆ ವರ್ಷಂಪೂರ್ತಿ ಹಮ್ಮಿಕೊಂಡಿರುವ ಅಂತರ್ಜಾಲಿತ ಶತಮಾನದ ಕನ್ನಡ ಕಾವ್ಯವಾಚನ ನಿತ್ಯೋತ್ಸವ ಸಮಾರಂಭದ ದಿವ್ಯಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು. ಪ್ರಭುಲಿಂಗಲೀಲೆಯ ಕೆಲವು ಚರಣಗಳನ್ನು ವಾಚಿಸುವ ಮೂಲಕ ಕಾವ್ಯವಾಚನ ಕಾರ್ಯ ಕ್ರಮಕ್ಕೆ ಚಾಲನೆ ನೀಡಿದರು.

ಗ್ರಂಥ ಸರಸ್ವತಿ ಪ್ರತಿಭಾ ರಂಗದ ಅಧ್ಯಕ್ಷ ಆರ್. ಶಿವಕುಮಾರಸ್ವಾಮಿ ಕುರ್ಕಿ ಅವರು ಮಾತನಾಡಿ, ಇಂದಿನಿಂದ ಮುಂದಿನ 365 ದಿನಗಳ ಕಾಲ ನೂರಾರು ಕವಿಗಳ ಕಾವ್ಯಗಳನ್ನು ವಿವಿಧ ಮಠಗಳ ಸ್ವಾಮೀಜಿಗಳು, ಕವಿಗಳು, ಕವಯತ್ರಿಯರು, ವಿದ್ವಾಂಸರು, ವಿಮರ್ಶಕರು, ಪತ್ರಕರ್ತರು, ಉಪನ್ಯಾಸಕರು, ಶಿಕ್ಷಕ- ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ದಿನಕ್ಕೊಬ್ಬರಂತೆ ವಾಚಿಸಲಿದ್ದಾರೆ. ಗ್ರಂಥ ಸರಸ್ವತಿ ಯೂಟ್ಯೂಬ್ ಚಾನೆಲ್ ಮೂಲಕ ನಿತ್ಯ ಸಂಜೆ 6.30 ಕ್ಕೆ ಈ ಕಾರ್ಯಕ್ರಮ ಬಿತ್ತರಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

## ಹರಿಹರ : ಶ್ರೀರಾಮ ಮಂದಿರಕ್ಕೆ ನಿಧಿ ಸಮರ್ಪಣಾ ಅಭಿಯಾನ



ಹರಿಹರ, ಜ.6- ಶ್ರೀರಾಮ ಮಂದಿರ ನಿರ್ಮಾಣಕ್ಕೆ ನಿಧಿ ಸಮರ್ಪಣಾ ಅಭಿಯಾನ ಪ್ರಯುಕ್ತ ರಾಮ ಭಜನೆ, ಕಾರ್ತಿಕೋತ್ಸವ, ಪ್ರಭು ಶ್ರೀರಾಮಚಂದ್ರರ ಹಾಗೂ ಭಾರತ ಮಾತಾ ಪೂಜೆ, ಮುತ್ತೈದೆಯರಿಗೆ ಅರಿಶಿಣ-ಕುಂಕುಮ ಕಾರ್ಯಕ್ರಮವನ್ನು ನಗರದ ಮಹಜೇನಹಳ್ಳಿ ಊರಮ್ಮನ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ನಗರದ ದೈವಜ್ಞ ಮಹಿಳಾ ಮಂಡಳಿ ವತಿಯಿಂದ ರಾಮ ಭಜನೆ ನಡೆಸಲಾಯಿತು. ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್. ಎಂ. ವೀರೇಶ್ ಹನಗವಾಡಿ, ನಗರಸಭೆ ಸದಸ್ಯೆ ನೀತಾ ಮೆಹರ್ವಾಡೆ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಮಾರುತಿ ಶೆಟ್ರು, ಕೃಷ್ಣಮೂರ್ತಿ ಶೆಟ್ರು, ಶಿವಪ್ರಕಾಶ್ ಶಾಸ್ತ್ರಿ, ಉಪಾಧ್ಯಕ್ಷ ತುಳಜಪ್ಪ ಭೂತೆ, ಅನಿಲ್ ಮತ್ತಿತರರು ಉಪಸ್ಥಿತರಿದ್ದರು.

## ಕುಂದುವಾಡದ ಬಳಿಯ ರಸ್ತೆ ಅಪಘಾತ : ಸವಾರ ಸಾವು

ದಾವಣಗೆರೆ ಜ.6- ಬೈಕ್ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದು ಗಂಭೀರವಾಗಿ ಗಾಯಗೊಂಡು ಸವಾರನೋರ್ವ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಕುಂದುವಾಡ ಸಮೀಪದ ರಸ್ತೆಯಲ್ಲಿ ಇಂದು ನಡೆದಿದೆ.

ಎಸ್.ಎಂ. ಕೃಷ್ಣ ನಗರದ ತರಗಾರ ಬಸವರಾಜ (36) ಮೃತ ಸವಾರ. ರಾಣೇಬೆನ್ನೂರು ತಾಲ್ಲೂಕಿನ ಅರೆಮಲ್ಲಾಪುರ ಗ್ರಾಮಕ್ಕೆ ಬೈಕ್ ನಲ್ಲಿ ಸಾಗುವಾಗ ಈ ಅಪಘಾತ ಸಂಭವಿಸಿದೆ. ಈ ಸಂಬಂಧ ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಾನುವಾರು, ಕುರಿ ಸಂತೆ ಪ್ರಾರಂಭ



**ಕೂಡ್ಲಿಗಿ**

ಕೂಡ್ಲಿಗಿ, ಜ. 6- ಪಟ್ಟಣದ ಬೆಂಗಳೂರು ರಸ್ತೆಯಲ್ಲಿರುವ ಶ್ರೀ ಕೊತ್ತಲ ಆಂಜನೇಯ ಬಯಲು ಜಾಗದಲ್ಲಿ ಜಾನುವಾರುಗಳು ಹಾಗೂ ಕುರಿ ಸಂತೆಯನ್ನು ಬಸವೇಶ್ವರ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಪ.ಪಂ. ಅಧ್ಯಕ್ಷರಾದ ಶಾರದಾಬಾಯಿ ಹಾಗೂ ಊರಿನ ಹಿರಿಯ ಮಲ್ಲಾಪುರದ ಭರಮಣ್ಣ ಉದ್ಘಾಟಿಸಿದರು.

ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ ಗೋಪಾಲಕೃಷ್ಣ ಸಭೆಯ ಅಧ್ಯಕ್ಷತೆ ವಹಿಸಿ ಸಭೆಯನ್ನುದ್ದೇಶಿಸಿ ಮಾತನಾಡಿ, ಪ್ರತಿ ಬುಧವಾರ ಸಂತೆ ನಡೆಯಲಿದ್ದು, ತಾವು ಸದಾ ರೈತರ ಜೊತೆ ನಿಲ್ಲುತ್ತೇನೆ ಎಂದು ಹೇಳಿದರು.

## ದಿದ್ದಿಗೆ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸಾಕಮ್ಮ ಅಧ್ಯಕ್ಷೆ



ಜಗಳೂರು, ಜ.6- ತಾಲ್ಲೂಕಿನ ದಿದ್ದಿಗೆ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಇಂದು ನಡೆದ ಚುನಾವಣೆಯಲ್ಲಿ ಶ್ರೀಮತಿ ಸಾಕಮ್ಮ ಬಣಕಾರ ಸಿದ್ದಪ್ಪ ಅವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಡಿ.ಎಂ. ಮರುಳಸಿದ್ದಯ್ಯ ತಿಳಿಸಿದ್ದಾರೆ.

# ವಚನ ವಿಶ್ವವಿದ್ಯಾನಿಲಯ ಸ್ಥಾಪನೆ

**(1ನೇ ಪುಟದಿಂದ)** ಟೆಂಡರ್ ಪ್ರಕ್ರಿಯೆ ಪೂರ್ಣವಾದ ಕೂಡಲೇ ಕಟ್ಟಡ ನಿರ್ಮಾಣ ಕಾರ್ಯವನ್ನು ಶೀಘ್ರ ಆರಂಭಿಸಲಾಗುವುದು ಎಂದು ತಿಳಿಸಿದ್ದಾರೆ.

ಕರ್ನಾಟಕ ಇತಿಹಾಸದಲ್ಲಿ ಇಂದು ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತಹ ದಿನವಾಗಿದೆ. ಮಾತು ಕೊಟ್ಟಂತೆ ನಡೆದುಕೊಂಡಿದ್ದೇವೆ. ಎರಡು ವರ್ಷದೊಳಗೆ ಅನುಭವ ಮಂಟಪ ನಿರ್ಮಿಸಿ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಂದ ಲೋಕಾರ್ಪಣೆಗೊಳಿ ಸಲಾಗುವುದು ಎಂದು ತಿಳಿಸಿದರು.

ಅವರು ಇವರು ಎನ್ನದೇ ಎಲ್ಲ ಸಮುದಾಯದ ಜನರು ಸೇರಿ ಚರ್ಚಿಸಿ ಚಿಂತನ ಮಂಥನ ನಡೆಸುತ್ತಿದ್ದ ಅನುಭವ ಮಂಟಪವು ಆದರ್ಶ ಸಂಸತ್ತಿನ ಮಾದರಿಯಾಗಿದೆ. ಸಾಮಾಜಿಕ ಬದಲಾವಣೆ ತರುವಲ್ಲಿ ಅನುಭವ ಮಂಟಪದ ಪಾತ್ರವು ಮಹತ್ವದ್ದಾಗಿದೆ. ಮನುಕುಲದ ಏಳಿಗೆಗೆ ಇಡೀ ವಚನ ಸಾಹಿತ್ಯ ಮಾರ್ಗದರ್ಶಿಯಾಗಿದೆ. ಬಸವಣ್ಣನವರು ಈ ಕಲ್ಯಾಣ ನಾಡಿನಿಂದ ಹೊರಹೊಮ್ಮಿದ ಈ ದೇಶ ಕಂಡ ಬಹುದೊಡ್ಡ ವಿಶ್ವಗುರು ಅನ್ನುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

ಗೋ.ರು.ಚ ಅವರಂತಹ ಇನ್ನೂ ಅನೇಕ ಹಿರಿಯ ಸಾಹಿತಿಗಳ ಸಲಹೆ ಪಡೆದು, ಈ ಭಾಗದ ಜನರ ಬೇಡಿಕೆಯಂತೆ ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ, ಪ್ರತಿ ವರ್ಷ ಬಸವ ಉತ್ಸವ ಆಚರಣೆಗೆ ಅವಕಾಶ ಕಲ್ಪಿಸಲಾಗುವುದು. ಇಂತಹ ಒಳ್ಳೆಯ ಕಾರ್ಯಕ್ಕೆ ಹಣಕಾಸಿನ ಕೊರತೆ ಇಲ್ಲ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ ಅವರು ಮಾತನಾಡಿ, ಪ್ರಧಾನ ಮಂತ್ರಿಗಳು ಅಯೋಧ್ಯೆಯಲ್ಲಿ ಐತಿಹಾಸಿಕ ರಾಮಮಂದಿರ ನಿರ್ಮಾಣಕ್ಕೆ ಚಾಲನೆ ನೀಡಿದಂತೆ, ಇಡೀ ಜಗತ್ತಿಗೆ ಸಮಾನತೆಯ ಸಂದೇಶ ಸಾರಿದ ಅನುಭವ ಮಂಟಪ ನಿರ್ಮಾಣಕ್ಕೆ ಇಂದು ಮುಖ್ಯಮಂತ್ರಿಗಳು ಭೂಮಿ ಪೂಜೆ ನೆರವೇರಿಸಿದ್ದು ಕೂಡ ಒಂದು ಐತಿಹಾಸಿಕ ಪ್ರಯತ್ನ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪಶು ಸಂಗೋಪನೆ, ಹಜ್ ಮತ್ತು ವಕ್ಫ್ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಭು ಚವ್ಹಾಣ್ ಅವರು ಮಾತನಾಡಿ, ಈ ಶರಣ ಕಾಯಕ ಭೂಮಿಯಲ್ಲಿ 12ನೇ ಶತಮಾನದ ವೈಭವವನ್ನು ಪುನರ್ ಸ್ಥಾಪಿಸುವ ಉದ್ದೇಶದಿಂದ ಅನುಭವ ಮಂಟಪ ನಿರ್ಮಾಣಕ್ಕೆ ಯಡಿಯೂರಪ್ಪನವರು ಚಾಲನೆ ನೀಡಿದ್ದು, ಬೀದರ್ ಮತ್ತು ರಾಜ್ಯದ ಐತಿಹಾಸಿದ ಪುಟಗಳಲ್ಲಿ ದಾಖಲಾಗುವಂತದ್ದಾಗಿದೆ ಎಂದಿದ್ದಾರೆ.

# ಕ್ರಾಂತಿಯುತ ಹೋರಾಟ ನಡೆದರೆ ಸರ್ಕಾರವೇ ಹೊಣೆ

**(1ನೇ ಪುಟದಿಂದ)** ಬೆಂಗಳೂರಿನ ವಿಧಾನಸೌಧದ ಆಡಳಿತ ಪೀಠದವರೆಗೆ ಪಂಚ ಲಕ್ಷ ಹೆಜ್ಜೆಗಳ ಬೃಹತ್ ಪಾದಯಾತ್ರೆಯನ್ನು ಹಮ್ಮಿಕೊಂಡಿದ್ದು, ಅಷ್ಟರೊಳಗಾಗಿ ರಾಜ್ಯದ ಮುಖ್ಯಮಂತ್ರಿಗಳು ತಮಗಿರುವ ಪರಮಾಧಿಕಾರ ಬಳಸಿ, ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ಶಿಫಾರಸ್ಸು ಮಾಡಿ ಕ್ಯಾಬಿನೆಟ್ ನಲ್ಲಿ ನಿರ್ಣಯ ಕೈಗೊಳ್ಳುವ ಮುಖೇನ ನಮ್ಮ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ನಾವು ಶಾಂತಿಯುತವಾಗಿ ಪಾದಯಾತ್ರೆ ನಡೆಸುತ್ತೇವೆ. ಪಾದಯಾತ್ರೆ ಸಮಯದಲ್ಲಿ ಸಮಾಜದ ಯುವಜನರು ರಸ್ತೆ ತಡೆ ಚಳವಳಿ ನಡೆಸಲು ನಿರ್ಧರಿಸಿದ್ದಾರೆ. ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ, ಲಿಂಗಾಯತ ಬಡ ಸಮಾಜಗಳಿಗೆ ಕೇಂದ್ರ ಸರ್ಕಾರ ಒಬಿಸಿ ಮೀಸಲಾತಿಗೆ ಸೇರ್ಪಡೆ ಮಾಡಬೇಕು ಎನ್ನುವುದು ನಮ್ಮ ಸಮಾಜದ ಒತ್ತಾಯವಾಗಿದೆ ಎಂದು ಹೇಳಿದರು.

ಮಂಗಳವಾರ ಮತ್ತೆ ಸಿಎಂ ಯಡಿಯೂರಪ್ಪ ಅವರು ದೂರವಾಣಿ ಕರೆ ಮಾಡಿ, ಇಷ್ಟರಲ್ಲೇ ತಮ್ಮ ಬೇಡಿಕೆ ಈಡೇರಿಸುತ್ತೇವೆ ಎಂದು ಪುನಃ ಭರವಸೆ ನೀಡಿದ್ದು, ಈ ಸಂಬಂಧ ನಮ್ಮ ಸಮಾಜದ ಶಾಸಕ ಸಿ.ಸಿ. ಪಾಟೀಲ್ ಅವರು ಜನವರಿ 9ರಂದು ಮಾತುಕತೆಗೆ ಬರುತ್ತೇವೆ ಎಂದು ಹೇಳಿದ್ದಾರೆ. ಈ ಸಮಯದಲ್ಲಿ ಮೀಸಲಾತಿ ಆದೇಶ ಬರಬಹುದು ಎಂಬ ನಿರೀಕ್ಷೆ ಇದೆ.



### ನಮ್ಮವರೇ ಸಿಎಂ ಇದ್ದರೂ ಹೋರಾಟ ಮುಜುಗರ

ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ದೊರಕಬೇಕು ಎನ್ನುವುದು ಎರಡು ದಶಕಗಳ ಹೋರಾಟ. ಈಗಾಗಲೇ ಹಲವು ಸರ್ಕಾರಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಈಗ ನಮ್ಮವರೇ ಸಿಎಂ ಇರುವಾಗ ಹೋರಾಟ ತೀವ್ರವಾಗಿಸಿದ್ದೇವೆ. ನಮ್ಮವರೇ ಮುಖ್ಯ ಮಂತ್ರಿಗಳು ಇರುವಾಗ ಹೋರಾಟ ಮಾಡುತ್ತಿರುವುದು ಮುಜುಗರದ ಸಂಗತಿ. ಆದರೂ ಸಮಾಜದ ಮಕ್ಕಳ ಭವಿಷ್ಯಕ್ಕಾಗಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಮೀಸಲಾತಿ ಪಡೆಯುವುದು ಅವಶ್ಯವಾಗಿದೆ. ಹೋರಾಟಕ್ಕಿಳಿಯದೇ ನಮಗೆ ಮೀಸಲಾತಿ ದೊರಕುವುದು ಕಷ್ಟ.

- ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ

ಆದರೂ ನಾವುಗಳು ಹೋರಾಟದ ರೂಪುರೇಷೆ ನಿಲ್ಲಿಸಿಲ್ಲ. ಹೋರಾಟಕ್ಕೆ ಸಜ್ಜಾಗುತ್ತಿದ್ದೇವೆ ಎಂದರು.

ಮಾಜಿ ಶಾಸಕ ವಿಜಯಾನಂದ ಕಾಶಪ್ಪನರ್ ಮಾತನಾಡಿ, ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ 'ಮಾಡು ಇಲ್ಲವೇ ಮಡಿ' ಎಂಬ ಘೋಷಣೆಯೊಂದಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದು, ಸುಮಾರು 15 ಲಕ್ಷ ಸಮಾಜ ಬಾಂಧವರೊಂದಿಗೆ ಈ ಬಾರಿ ಜೀವ ಹೋದರೂ ಸಹ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಮೀಸಲಾತಿ ಪಡೆಯುವುದು ಮಾತ್ರ ಖಚಿತವೆಂದರು.

**ಅಪೇಕ್ಷೆ ಪಟ್ಟು ಕರೆದವರಿಗೆ ನನ್ನ ಬೆಂಬಲ:** ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಪಡೆಯಲು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಳ ಹಂತದಿಂದ ಹೋರಾಟ ನಡೆಸುತ್ತಿದ್ದಾರೆ. ಸಮಾಜದ ಏಳಿಗೆ ಮತ್ತು ಸಂಘಟನೆಗಾಗಿ ಸಮಾಜವನ್ನು ಹೋರಾಟಕ್ಕೆ ಸಜ್ಜುಗೊಳಿಸುವ ಜೊತೆಗೆ ಜಾಗೃತಗೊಳಿಸುತ್ತಿದ್ದಾರೆ. ಇದು ಪಕ್ಷಾಧಾರಿತ ಹೋರಾಟವಲ್ಲ.

ನಮ್ಮನ್ನು ಅಪೇಕ್ಷೆ ಪಟ್ಟು ಪ್ರೀತಿಯಿಂದ ಕರೆದವರೊಂದಿಗೆ ಹೋರಾಟಕ್ಕೆ ಬೆಂಬಲ ನೀಡುತ್ತೇನೆ. ಮತ್ತೆ ಕೆಲವರು ಹೈಟೆಕ್ ಸೋಷಿಯಲ್ ಮೀಡಿಯಾ ಸ್ವಾಮೀಜಿ ಇದ್ದಾರೆ. ಅವರು ಫೇಸ್‌ಬುಕ್, ವಾಟ್ಸಾಪ್ ಮೂಲಕ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಸೆಳೆಯುತ್ತಿದ್ದಾರೆ ಎಂದು ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಬಗ್ಗೆ ಪ್ರತಿಕ್ರಿಯಿಸುತ್ತಾ, ನಮಗೆ ಎರಡು ರೀತಿಯ ಸ್ವಾಮೀಜಿಗಳು ಬೇಕಾಗಿದ್ದಾರೆ. ಅಲ್ಲದೇ ಸಾಮಾಜಿಕ ಜಾಲತಾಣದ ಹೋರಾಟವೂ ಅಗತ್ಯವಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಮೇಯರ್ ಬಿ.ಜಿ. ಅಜಯ ಕುಮಾರ್, ಮುಖಂಡರಾದ ಎಂ.ಟಿ. ಸುಭಾಷ್ಚಂದ್ರ, ಹೆಚ್.ಎಸ್. ರವೀಂದ್ರ, ಪ್ರಭು ಕಲಬುರ್ಗಿ, ಅಶೋಕ ಗೋಪನಾಳ್, ಮಂಜುಳ ಮಹೇಶ್, ಮಹಾಂತೇಶ್ ಒಣರೊಟ್ಟಿ, ರುದ್ರಮ್ಮ ಮಲ್ಲಿಕಾರ್ಜುನ, ಆಶಾ ಸೋಮಶೇಖರ್ ಸೇರಿದಂತೆ ಇತರರು ಇದ್ದರು.

## ಕುರ್ಕಿ ದೊಡ್ಡಮನೆ ಅಜ್ಜಪ್ಪರ ರುದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ವಾಸಿ,
ಅಜ್ಜಪ್ಪರ ದೊಡ್ಡಮನೆ ಎ. ಮುರುಗೇಂದ್ರಪ್ಪ ಇವರ ಸಹೋದರನಾದ
**ಶ್ರೀ ದೊಡ್ಡಮನೆ ಅಜ್ಜಪ್ಪರ ರುದ್ರಪ್ಪ** ಅವರು ದಿನಾಂಕ 06.01.2021ನೇ ಬುಧವಾರ ಸಂಜೆ 6.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.01.2021ನೇ ಗುರುವಾರ ಮಧ್ಯಾಹ್ನ 12 ಗಂಟೆಗೆ ಕುರ್ಕಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಅಜ್ಜಪ್ಪರ ವಂಶಸ್ಥರು, ಕುರ್ಕಿ, ದೊಡ್ಡಮನೆ ವಂಶಸ್ಥರು, ಕುರ್ಕಿ,**
**ಮೊ. : 99453 46936**

## ಜಯರಾಜ್ ಗೌಳಿ ನಿಧನ



ದಾವಣಗೆರೆಯ ಮಹಾರಾಜ್ ಪೇಟೆ ವಾಸಿ, ಬಿಜೆಪಿ ಜಿಲ್ಲಾ ಕಾರ್ಯಾಲಯದ ಕಾರ್ಯದರ್ಶಿ ಲಿಂಗರಾಜ್ ಗೌಳಿ ಇವರ ಸಹೋದರ ಜಯರಾಜ್ ಗೌಳಿ (38) ಅವರು ದಿನಾಂಕ 6.01.2021 ರಂದು ಬುಧವಾರ ಮಧ್ಯಾಹ್ನ 1.50ಕ್ಕೆ ನಿಧನರಾಗಿದ್ದಾರೆ. ಪತ್ನಿ, ಸಹೋದರಿಯರು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.01.2021 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಎ.ಎಸ್. ವಿಜಯಲಕ್ಷ್ಮಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 11ನೇ ಮೇನ್, 4ನೇ ಕ್ರಾಸ್ ವಾಸಿ, (# 3274) ಎ.ಎನ್. ಶೇಖರ್ ಅವರ ಧರ್ಮಪತ್ನಿ, ಇನ್ನರ್ ವ್ಹೀಲ್ ಕ್ಲಬ್‌ನ ಮಾಜಿ ಅಧ್ಯಕ್ಷರು, ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಎ.ಎಸ್. ವಿಜಯಲಕ್ಷ್ಮಿ ಅವರು ದಿನಾಂಕ 5.01.2021 ರಂದು ಮಂಗಳವಾರ ಬೆಳಗಿನ ಜಾವ 3 ಗಂಟೆಗೆ ನಿಧನರಾಗಿದ್ದಾರೆ. ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.01.2021 ರಂದು ಮಂಗಳವಾರ ಸಂಜೆ 5 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿತು.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# 'ಸಿದ್ದಗಂಗಾ ಶ್ರೀಗಳ ವೃತ್ತ' ನಾಮಕರಣಕ್ಕೆ ಒತ್ತಾಯ



ದಾವಣಗೆರೆ,ಜ.6- ನಗರದ ಡಿ. ದೇವ ರಾಜ ಅರಸು ಬಡಾವಣೆ 'ಸಿ' ಬ್ಲಾಕ್ ನಲ್ಲಿ ರುವ ಆರ್.ಟಿ.ಓ. ಕಚೇರಿ ಮುಂಭಾಗದ ವೃತ್ತಕ್ಕೆ 'ಸಿದ್ದಗಂಗಾ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ವೃತ್ತ' ಎಂದು ನಾಮಕರಣ ಮಾಡುವಂತೆ ವೀರಶೈವ ಸಮಾಜದ ಮುಖಂಡ ಕೆ.ಬಿ.ನಾಗರಾಜ್ ಅವರು ಪಾಲಿಕೆಯನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಮಹಾಪೌರರಾದ ಬಿ.ಜಿ. ಅಜಯ್ ಕುಮಾರ್ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಲಿಖಿತ ಮನವಿ ಪತ್ರ ಸಲ್ಲಿಸಿದ ಅವರು, ಸ್ವಾಮೀಜಿ ಹೆಸರನ್ನು ವೃತ್ತಕ್ಕೆ ನಾಮಕರಣ ಮಾಡುವುದರ ಜೊತೆಗೆ, ಅಲ್ಲಿ ಶ್ರೀಗಳ ಪುತ್ಥಳಿಯನ್ನು ಸ್ಥಾಪಿಸುವಂತೆಯೂ ಆಗ್ರಹಿಸಿದ್ದಾರೆ. ಸದರಿ ವೃತ್ತದಲ್ಲಿ ಈಗಾಗಲೇ ಶ್ರೀಗಳ ಹೆಸರಿನ ನಾಮಫಲಕವನ್ನು ಅಲ್ಲಿನ ನಾಗರಿಕರು ಹಾಕಿದ್ದು, ಅದನ್ನು ನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಅನುಮೋದಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾಗರಾಜ್ ಅವರು ಮನವಿ ಪತ್ರದಲ್ಲಿ ಕೇಳಿಕೊಂಡಿದ್ದಾರೆ.

ಸಿದ್ದಗಂಗಾ ಶ್ರೀಗಳು ತ್ರಿವಿಧ ದಾಸೋಹದ ಮೂಲಕ ಹಾಗೂ ಬಸವಾದಿ ಪರಂಪರೆಯಲ್ಲಿ ಬದುಕಿ ಮನುಕುಲದ ಉದ್ಧಾರಕ್ಕಾಗಿ ಶ್ರಮಿಸಿ, 'ನಡೆದಾಡುವ ದೇವರು' ಎಂದಾಗಿದ್ದರು. ಶ್ರೀಗಳ ಸೇವೆಯನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಈಗಾಗಲೇ ಭಾರತ ರತ್ನ ಪ್ರಶಸ್ತಿಗೆ ಶಿಫಾರಸ್ಸು ಮಾಡಿದೆ. ಈ ಹಿನ್ನೆಲೆಯಲ್ಲಿ ಸದರಿ ವೃತ್ತಕ್ಕೆ ಶ್ರೀಗಳ ಹೆಸರನ್ನು ಮುಂದುವರೆಸುವುದು ಸೂಕ್ತ ಎಂದು ನಾಗರಾಜ್ ಅವರು ತಮ್ಮ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

## ನಗರದಲ್ಲಿಂದು ಮಹಿಳಾ ಸಾಂಸ್ಕೃತಿಕ ಉತ್ಸವ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಇಂದು ಸಂಜೆ 5 ಕ್ಕೆ ಶ್ರೀ ಶಿವಯೋಗಿ ಮಂದಿರದಲ್ಲಿ ಮಹಿಳಾ ಸಾಂಸ್ಕೃತಿಕ ಉತ್ಸವ ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ಸಾನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಕಾರ್ಯಕ್ರಮವನ್ನು ಉದ್ಘಾಟಿಸುವರು.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಜಿ.ಎಂ ಸಿದ್ದೇಶ್ವರ, ಎಂ.ಪಿ.ರೇಣುಕಾಚಾರ್ಯ, ಕೆ.ವಿ ಶಾಂತಕುಮಾರಿ, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ ರಾಮಚಂದ್ರ, ಎಸ್.ಎ. ರವೀಂದ್ರನಾಥ್, ಪ್ರೊ. ಎನ್. ಲಿಂಗಣ್ಣ, ಎಸ್. ರಾಮಪ್ಪ, ಬಿ.ಜಿ.ಅಜಯ್‌ಕುಮಾರ್, ರಾಜನಹಳ್ಳಿ ಶಿವಕುಮಾರ್, ಸಾಕಮ್ಮ ಗಂಗಾಧರ್ ನಾಯ್ಕ್, ಮಮತ ಮಲ್ಲೇಶಪ್ಪ, ಎಸ್. ಟಿ. ಮೀನಾ ಶ್ರೀನಿವಾಸ್, ಪದ್ಮಾ ಬಸವಂತಪ್ಪ, ಬಲವಂತರಾವ್ ಪಾಟೀಲ್, ಜಿ.ನಜ್ಮಾ, ರುದ್ರಾಕ್ಷಿಬಾಯಿ ಮುಖ್ಯ ಅತಿಥಿಗಳಾಗಿದ್ದಾರೆ.

# ಹಳ್ಳಿಗಳಲ್ಲಿ ಸಂಭ್ರಮದ ಮಹೇಶ್ವರ ಜಾತ್ರೆ



ಕನಗೊಂಡನಹಳ್ಳಿಯಲ್ಲಿ ಮಹೇಶ್ವರ ಜಾತ್ರೆ ಅಂಗವಾಗಿ ಪ್ರಸಾದ ಸ್ವೀಕರಿಸುತ್ತಿರುವ ಗ್ರಾಮಸ್ಥರು

ದಾವಣಗೆರೆ, ಜ.6- ಮಹೇಶ್ವರನ ಜಾತ್ರೆ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಆಚರಿಸಲ್ಪಡುವ ಪ್ರಮುಖ ಹಬ್ಬಗಳಲ್ಲೊಂದು. ಆದರೆ ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಮಹೇಶ್ವರ ಜಾತ್ರೆ ಕಳೆಗುಂದಿತ್ತು. ನಗರಕ್ಕೆ ಸಮೀಪದ ಬಸಾಪುರ ಸೇರಿದಂತೆ ಹಲವೆಡೆ ಹಬ್ಬದ ಆಚರಣೆ ನಡೆಯಲಿಲ್ಲ. ಆದರೆ ಕೆಲವು ಹಳ್ಳಿಗಳಲ್ಲಿ ಪ್ರತಿ ವರ್ಷದಂತೆಯೇ ಈ ವರ್ಷವೂ ಹಬ್ಬ ಆಚರಣೆ ನಡೆಯಿತು. ಮಹೇಶ್ವರ ಜಾತ್ರೆ ಎಂದರೆ ಅನ್ನ, ಹಾಲು, ಬೆಲ್ಲ, ಬಾಳೆಹಣ್ಣಿನ ಊಟ ವಿಶೇಷ.

ಕೆಲವೆಡೆ ಒಂದು ದಿನ ಆಚರಣೆಯಾದರೆ ಮತ್ತೆ ಕೆಲವೆಡೆ ಎರಡು ದಿನಗಳ ಹಬ್ಬ ನಡೆಯುತ್ತದೆ. ಅದರಲ್ಲಿ ಒಂದು ದಿನ ಸಿಹಿ ಊಟ ಬಡಿಸಲಾಗುತ್ತದೆ.

ತಾಲ್ಲೂಕಿನ ಕನಗೊಂಡನಹಳ್ಳಿ ಗ್ರಾಮದಲ್ಲಿ ಸಂಭ್ರಮದಿಂದ ಮಹೇಶ್ವರನ ಹಬ್ಬ ಆಚರಿಸಲಾಯಿತು. ಗ್ರಾಮದ ಸಮೀಪದ ತೋಟಕ್ಕೆ ಪಲ್ಲಕ್ಕಿಯೊಂದಿಗೆ ದೇವರ ಮೂರ್ತಿ ತಂದು ಪೂಜಿಸಿ, ಪ್ರಸಾದಕ್ಕೆ ಚಾಲನೆ ನೀಡಲಾಯಿತು.

# ಪಂಚಮಸಾಲಿಗೆ ಮೀಸಲಾತಿ : ಕಾರಿಗನೂರಿನಲ್ಲಿ ಪಾದಯಾತ್ರೆಯ ಪೂರ್ವಭಾವಿ ಸಮಾವೇಶ

ಚನ್ನಗಿರಿ, ಜ.6- ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹಮ್ಮಿಕೊಂಡಿರುವ ಪಂಚ ಲಕ್ಷ ಹೆಜ್ಜೆಗಳ ಪಾದಯಾತ್ರೆಯ ಪೂರ್ವಭಾವಿ ಸಮಾವೇಶ ದಿ.ಜೆ.ಹೆಚ್. ಪಟೇಲ್ ಅವರ ಜನ್ಮಭೂಮಿ ಚನ್ನಗಿರಿ ತಾಲ್ಲೂಕಿನ ಕಾರಿಗನೂರು ಕ್ರಾಸ್ ಬಳಿ ಬುಧವಾರ ನಡೆಯಿತು.

ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಜಯಮೃತ್ಯುಂಜಯ ಶ್ರೀಗಳು, ದೇಶಕ್ಕೆ ಅನ್ನ ನೀಡುವ ರೈತನ ಮಕ್ಕಳು ಮೀಸಲಾತಿಯಿಂದ ವಂಚಿತರಾಗಿದ್ದಾರೆ. ಈ ಕಾರಣಕ್ಕಾಗಿಯೇ ನಾವು ಪಾದಯಾತ್ರೆ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

**ಸಮುದಾಯಗಳು ಸಮಾಜದಲ್ಲಿ ಯಶಸ್ಸು ಗಳಿಸಬೇಕಾದರೆ ಧರ್ಮ ಮುಖ್ಯ. ಸ್ಥಿತಿವಂತರಿಗಿಂತ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ದೊರೆಯಬೇಕು.**

ರಾಜ್ಯದಲ್ಲಿ ಸುಮಾರು 90 ಲಕ್ಷ ಜನ ಸಂಖ್ಯೆ ಹೊಂದಿರುವ ಪಂಚಮಸಾಲಿ ಸಮಾಜ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದೆ. ಸಮಾಜವನ್ನು ಮೇಲೆತ್ತಬೇಕಾದರೆ 2ಎ ಮೀಸಲಾತಿ ಅತ್ಯಗತ್ಯ ಎಂದು ಶ್ರೀಗಳು ನುಡಿದರು. ಇದರೊಟ್ಟಿಗೆ ಲಿಂಗಾಯಿತ ಹಾಗೂ ಇತರೆ 75 ಉಪಜಾತಿಗಳಿಗೆ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿಗೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಬೇಕು ಎಂದು ಆಗ್ರಹಿಸಿದರು. ಕೂಡಲ ಸಂಗಮ ಇಂದು ಅಂತರರಾಷ್ಟ್ರೀಯ ತಾಣವಾಗಲು ದಿ.ಜೆ.ಹೆಚ್.ಪಟೇಲ್ ಅವರ ಕೊಡುಗೆ ಅಪಾರವಾಗಿದೆ ಎಂದು ಶ್ರೀಗಳು ಸ್ಮರಿಸಿದರು.

ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್ ಮಾತನಾಡುತ್ತಾ, ಪಂಚಮಸಾಲಿ ಸಮಾಜದ ಮೇಲೆ ದೌರ್ಜನ್ಯ ನಡೆದರೆ ನಾನೇ ಮೊದಲು ಗುರಾಣಿಯಾಗಿ ಹೊರಾಡುತ್ತೇನೆ ಎಂದರು.

ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಮಹಾನಗರ ಪಾಲಿಕೆ ಮೇಯರ್ ಬಿ.ಜೆ. ಅಜಯ್ ಕುಮಾರ್, ಹೆಚ್.ಎಸ್.ನಾಗರಾಜ್, ಮಲ್ಲಿಕಾರ್ಜುನ್ ಹಿರೇಕೊಪ್ಪ, ಉಜ್ಜಪ್ಪ ಕಾರಿಗನೂರು, ಚಂದ್ರಣ್ಣ, ಕರಿಯಪ್ಪ, ಕಲ್ಲೇಶಪ್ಪ, ಶ್ರೀಧರ್ ಪಾಟೀಲ್, ಮಂಜುಳಮ್ಮ, ರುದ್ರಮ್ಮ ಹಾಗು ಇತರರು ಉಪಸ್ಥಿತರಿದ್ದರು.

# ಉಕ್ಕಡಗಾತ್ರಿ : 4 ಕೋಟಿ ರೂ. ಅನುದಾನದ ಕಾಮಗಾರಿಗೆ ಚಾಲನೆ



ಮಲೇಬೆನ್ನೂರು, ಜ.6- ಸುಕ್ಷೇತ್ರ ಉಕ್ಕಡಗಾತ್ರಿ ಗ್ರಾಮದಲ್ಲಿ ತುಂಗಭದ್ರಾ ನದಿಗೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ರಾಮಪ್ಪ ಅವರು ನಿನ್ನೆ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ನೀರಾವರಿ ನಿಗಮದಿಂದ ಸುಮಾರು 4 ಕೋಟಿ ರೂ. ಅನುದಾನದಲ್ಲಿ ಈ ಕಾಮಗಾರಿ ಕೈಗೊಂಡಿದ್ದು, ನದಿ ಪಾತ್ರದ ಹಳ್ಳಿಗಳಿಗೆ ಅಗತ್ಯ ಕಾಮಗಾರಿಗಳನ್ನು ಮಂಜೂರು ಮಾಡಿಸಲು ಶ್ರಮಿಸುತ್ತೇನೆಂದು ರಾಮಪ್ಪ ಹೇಳಿದರು.

ಅಲ್ಲದೇ ಹರಿಹರ ತಾಲ್ಲೂಕಿನಲ್ಲಿ ಪ್ರಮುಖವಾಗಿ ಆಗಬೇಕಿರುವ ಯೋಜನೆಗಳ ಮಂಜೂರಾತಿಗಾಗಿ ಸರ್ಕಾರಕ್ಕೆ ಸಾಕಷ್ಟು ಪ್ರಸ್ತಾವನೆ ಸಲ್ಲಿಸಿದ್ದೇನೆ. ಆದರೆ, ಈ ಸರ್ಕಾರ ಈ ಹಿಂದಿನ ಸಮ್ಮಿಶ್ರ ಸರ್ಕಾರ ಮಂಜೂರು ಮಾಡಿದ್ದ ಅನುದಾನಗಳನ್ನು ತಡೆ ಹಿಡಿದಿದೆ ಎಂದು ಶಾಸಕರು ಬೇಸರ ವ್ಯಕ್ತಪಡಿಸಿದರು. ಪರಿಸ್ಥಿತಿ ಹೀಗೆ ಮುಂದುವರೆದರೆ, ಬೀದಿಗಿಳಿದು ಹೋರಾಟ ಮಾಡುವುದಾಗಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕರನ್ನು ಸನ್ಮಾನಿಸಿ, ಅಭಿನಂದಿಸಿದರು. ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್. ಸುರೇಶ್, ಗ್ರಾ.ಪಂ. ಸದಸ್ಯರಾದ ಹೇಮಪ್ಪ ಶಿವಣ್ಣರ, ಬಿ. ಶಿವಣ್ಣ, ಕರಿಸಿದ್ದಪ್ಪ, ಸಂಜೀವರೆಡ್ಡಿ ಬಣಕಾರ, ದೇವೇಂದ್ರಪ್ಪ ಹೊಟ್ಟೇರ, ಗ್ರಾಮದ ಬಿದ್ದಾಡಪ್ಪ, ರಾಜಶೇಖರಸ್ವಾಮಿ, ಮಂಜು ದೊಡ್ಮನಿ, ಗದಿಗೆಪ್ಪ, ಗುತ್ತ್ಯಪ್ಪ, ನೀರಾವರಿ ನಿಗಮದ ಎಇಇ ಸಂತೋಷ್ ಮತ್ತಿತರರು ಹಾಜರಿದ್ದರು.

# ಯಡಿಯೂರಪ್ಪಗೆ ಮತ್ತೆ ಭೂ ಕಂಟಕ

**(1ನೇ ಪುಟದಿಂದ)** ನ್ಯಾಯಾಲಯದ ಆದೇಶ ಸಿಂಧುವಾಗುತ್ತದೆ. ಉಳಿದ ಮೂವರ ವಿರುದ್ಧ ಪ್ರಕರಣ ಮುಂದುವರೆಯಲಿದೆ ಎಂದು ತಿಳಿಸಲಾಗಿದೆ.

ಇದಕ್ಕೂ ಮುಂಚೆ ಮಂಗಳವಾರ ಆದೇಶವೊಂದನ್ನು ಹೊರಡಿಸಿದ್ದ ನ್ಯಾಯಮೂರ್ತಿ ಕುನ್ಹ, ಗಂಗೇನಹಳ್ಳಿಯ ಅಕ್ರಮ ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪ ಮತ್ತಿತರರ ವಿರುದ್ಧ ತನಿಖೆ ನಡೆಸಲು ಲೋಕಾಯುಕ್ತ ಪೊಲೀಸರಿಗೆ ಅನುಮತಿ ನೀಡಿದ್ದರು.

ಈ ವಿಷಯದಲ್ಲಿ ನ್ಯಾಯಾಲಯ ಯಡಿಯೂರಪ್ಪಗೆ 25 ಸಾವಿರ ರೂ.ಗಳ ದಂಡವನ್ನೂ ವಿಧಿಸಿತ್ತು.

# ಸರ್ಕಾರ ಪದೇ ಪದೇ ತಪ್ಪು ಮಾಡುತ್ತಿದೆ : ಯತ್ನಾಳ್ ಟೀಕೆ



ಬೆಂಗಳೂರು, ಜ. 6 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಪದೇ ಪದೇ ತಪ್ಪು ಮಾಡುತ್ತಿದೆ. ನಾನು ಯಾರಿಗೂ ಅಂಜುವುದಿಲ್ಲ ಎಂದು ಬಿಜೆಪಿಯ ಹಿರಿಯ ನಾಯಕ ಬಸವನಗೌಡ ಪಾಟೀಲ್ ಯತ್ನಾಳ್ ಇಂದಿಲ್ಲಿ ಗುಡುಗಿದ್ದಾರೆ.

**ಸರ್ಕಾರ ತಪ್ಪು ಮಾಡಿದಾಗ ಅದನ್ನು ಹೇಳುವುದು ಪಕ್ಷ ವಿರೋಧಿ ಕೆಲಸ ಅಲ್ಲ**

ಮುಖ್ಯಮಂತ್ರಿಗಳು ಕರೆದಿದ್ದ ಶಾಸಕರ ಸಭೆಯಲ್ಲಿ ಆಗಿರುವ ತಪ್ಪನ್ನು ಎತ್ತಿ ಹೇಳಿದ್ದೇನೆ, ಅದನ್ನು ಮಂತ್ರಿಗಿರಿಗಾಗಿ ಕಾತರಿಸುತ್ತಿರುವ ಒಬ್ಬ ಶಾಸಕ ಮಾತ್ರ ವಿರೋಧಿಸಿದ್ದಾರೆ. ಉಳಿದವರು ವಿರೋಧಿಸಿಲ್ಲ, ನನ್ನ ಮಾತಿಗೆ ಸಹಮತ ಇದೆ ಎಂದಿದ್ದಾರೆ.

ಸರ್ಕಾರ ತಪ್ಪು ಮಾಡಿದಾಗ ಅದನ್ನು ಹೇಳುವುದು ಪಕ್ಷ ವಿರೋಧಿ ಕೆಲಸ ಅಲ್ಲ, ಅಭಿವೃದ್ಧಿಯ ಪರ ಧ್ವನಿ ಎತ್ತಿದ್ದೇನೆ, ಉತ್ತರ ಕರ್ನಾಟಕ ಭಾಗಕ್ಕೆ ಅನ್ಯಾಯವಾದಾಗ ಧ್ವನಿ ಎತ್ತುತ್ತೇನೆ, ಜನಪರ ವಿಷಯಗಳ ಬಗ್ಗೆ ಮಾತನಾಡಿದರೆ ಪಕ್ಷ ವಿರೋಧಿ ಕೆಲಸವಾಗುತ್ತದೆಯೇ? ಎಂದು ಪ್ರಶ್ನಿಸಿದರು.

ಅಭಿವೃದ್ಧಿ ಪರ ಧ್ವನಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ, ಶಾಸಕರ ಸಭೆಯಲ್ಲಿ ಮಾತನಾಡಿದಾಗ ಯಡಿಯೂರಪ್ಪ ಅವರಿಗೆ ಬೇಸರವಾಯಿತೋ ಇಲ್ಲವೋ ಗೊತ್ತಿಲ್ಲ. ನನ್ನ ವಿರುದ್ಧ ಇದುವರೆಗೆ ಯಾರೂ ಶಿಸ್ತು ಸಮಿತಿಗೆ ದೂರು ನೀಡಿಲ್ಲ ಎಂದರು.

ನನ್ನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತಿದೆ ಎನ್ನುವವರು ನೀವೇ, ಬಿಜೆಪಿ ವರಿಷ್ಠರು ಕ್ರಮಕೈಗೊಳ್ಳಲಿದ್ದಾರೆ ಎಂದು ಬರೆಯುವವರೂ ನೀವೇ ಎಂದು ಪತ್ರಕರ್ತರ ವಿರುದ್ಧವೇ ಹರಿಹಾಯ್ದರು.

ಶಿವಾನಂದ ಸರ್ಕಲ್ ಅಕ್ಕಪಕ್ಕದಿಂದ ಇಂತಹ ಪ್ರಶ್ನೆ ಕೇಳಲು ಸಂದೇಶ ಬಂದಿರುತ್ತದೆ, ಅದಕ್ಕಾಗಿ ಕೇಳಿರುತ್ತೀರಿ ಎಂದು ಮಾಧ್ಯಮಗಳನ್ನು ಯತ್ನಾಳ್ ಕುಟುಕಿದರು.

ಮಂತ್ರಿಗಿರಿಗಾಗಿ ಹಪಹಪಿಸುತ್ತಿಲ್ಲ, ಇದಕ್ಕಾಗಿ ಯಡಿಯೂರಪ್ಪ ಅವರ ಮನೆಗೆ ಹೋಗಿಲ್ಲ, ಸರ್ಕಾರವನ್ನು ಟೀಕಿಸಿದ್ದಕ್ಕಾಗಿ ಕ್ಷಮೆ ಕೇಳಿದ್ದೇನೆ ಅನ್ನುವುದು ಸುಳ್ಳು, ಹಾಗೆಲ್ಲ ಕ್ಷಮೆ ಕೇಳುವ ಅಗತ್ಯವೇ ಇಲ್ಲ ಎಂದರು.

# ಗಾಂಧೀಜಿ, ಅಂಬೇಡ್ಕರ್ ಹೆಸರಿನಲ್ಲಿ ವಂಚಿಸುವ ಕಾಂಗ್ರೆಸ್

**(1ನೇ ಪುಟದಿಂದ)** ಅವಮಾನಿಸುವ ಮೂಲಕ ಕಾಂಗ್ರೆಸ್ ಮಾಡಿದ ಪಾಪವನ್ನು ಪ್ರಧಾನಿ ನರೇಂದ್ರ ಮೋದಿ ಸರಿ ಪಡಿಸುತ್ತಿದ್ದಾರೆ ಎಂದರು.

ದೇಶ ವಿಭಜನೆಯ ಕಳಂಕ ಹೊರಲು ಸಿದ್ಧರಿಲ್ಲ ಎಂದಿದ್ದ ಅಂಬೇಡ್ಕರ್ ಮಾತನ್ನು ನಿರ್ಲಕ್ಷಿಸಿದ ಕಾಂಗ್ರೆಸ್, ದೇಶ ವಿಭಜನೆಗೆ ಮುಂದಾಯಿತು. ರಾಜಕಾ ರಣದಲ್ಲಿ ನೆಹರೂ ಅವರು ತಂತ್ರ ನಡೆಸಿ ಅಂಬೇಡ್ಕರ್ ಸೋಲುವಂತೆ ಮಾಡಿ ಅವಮಾನ ಮಾಡಿದರು.

ಗಾಂಧೀಜಿ, ನೆಹರು ಸಮಾಧಿಗಳನ್ನು ದೆಹಲಿಯಲ್ಲಿ ನಿರ್ಮಿಸಿದ ಕಾಂಗ್ರೆಸ್ ಮುಖಂಡರು ಅಂಬೇಡ್ಕರ್ ಸಮಾಧಿಯನ್ನು ದೆಹಲಿಯಲ್ಲಿ ನಿರ್ಮಿಸಲು ಅವಕಾಶ ನೀಡಲಿಲ್ಲ. ಅಂತಿಮ ಕ್ರಿಯೆಗಳನ್ನೂ ನಡೆಸಲಿಲ್ಲ. ಈ ರೀತಿ ಕಾಂಗ್ರೆಸ್ ಸತತವಾಗಿ ಅಂಬೇಡ್ಕರ್ ಅವರನ್ನು ಅವಮಾನಿಸುತ್ತಲೇ ಬಂದಿದೆ ಎಂದರು.

ಇದೀಗ ಪ್ರಧಾನಿ ಮೋದಿ ಅಂಬೇಡ್ಕರ್ ಅವರ ಸಮಾಧಿಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿಸುವ ಮೂಲಕ ಕಾಂಗ್ರೆಸ್‌ನ ತಪ್ಪುಗಳನ್ನು ಸರಿಪಡಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಪರಿಶಿಷ್ಟ ಜಾತಿಯ ಜನತೆ ಇಂತಹ ವಿಷಯಗಳನ್ನು ತಿಳಿಯಬೇಕಿದೆ. ಓಟ್ ಬ್ಯಾಂಕ್‌ಗೆ ಬಳಸಿಕೊಂಡು ನಿರ್ಲಕ್ಷಿಸುವ ಕಾಂಗ್ರೆಸ್‌ಗೆ ಪಾಠ ಕಲಿಸುವ ಅಗತ್ಯವಿದೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕಾಂಗ್ರೆಸ್ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಮತಗಳಿಂದಲೇ ನಾವು ಗೆಲ್ಲುತ್ತೇವೆ ಎಂಬ ಕಾಲ ಬದಲಾಗಿ, ಹಿಂದುಳಿದ ಜನಾಂಗದ ಉದ್ಧಾರ ಬಿಜೆಪಿಯಿಂದ ಮಾತ್ರ ಎನ್ನುವ ಕಾಲ ನಿರ್ಮಾಣವಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಮುಖಂಡರು ಗರೀಬಿ ಹಠಾವೋ ಎಂದು ಹೇಳುತ್ತಲೇ 70 ವರ್ಷ ಕಾಲ ಕಳೆದರು. ಆದರೆ ಪ್ರಧಾನಿ ಮೋದಿ ಪ್ರತಿ ಬಡವನಿಗೂ ಸೂರು ಕೊಡಲು ಕಾರ್ಯಪ್ರವೃತ್ತರಾದರು. ಎಸ್ಸಿ ಜನಾಂಗದವರನ್ನು ರಾಷ್ಟ್ರಪತಿ ಮಾಡಿದ ಹಾಗೂ ಹಿಂದುಳಿದವರ ಮೀಸಲಾತಿಯನ್ನು ಮುಂದುವರೆಸಿದ ಕೀರ್ತಿ ಬಿಜೆಪಿ ಸರ್ಕಾರದ್ದು ಎಂದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡುತ್ತಾ, ಸರ್ಕಾರ ಸಾವಿರಾರು ಕೋಟಿ ರೂ.ಗಳ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಗೆ ನೀಡುತ್ತದೆ. ಅದು ಸದ್ಬಳಕೆ ಯಾಗುವಂತೆ ಮಾಡುವ ಕೆಲಸ ಎಸ್ಸಿ ಮೋರ್ಚಾ ಪದಾಧಿಕಾರಿಗಳದ್ದು ಎಂದರು.

ಸರ್ಕಾರದ ಹೊಸ ಯೋಜನೆಗಳನ್ನು ಹಿಂದುಳಿದ ವರ್ಗದವರಿಗೆ ತಲುಪಿಸುವಂತಾದಾಗ ಮಾತ್ರ ಇಂತಹ ಸಭೆ ಸಾರ್ಥಕತೆ ಪಡೆಯುತ್ತದೆ ಎಂದರು.


ಎಸ್.ಸಿ. ಮೋರ್ಚಾ ರಾಜ್ಯಾಧ್ಯಕ್ಷ ಚಲುವಾದಿ ನಾರಾಯಣ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಬಿಜೆಪಿ ದಲಿತ ವಿರೋಧಿ, ಅಂಬೇಡ್ಕರ್ ವಿರೋಧಿ, ಸಂವಿಧಾನ ವಿರೋಧಿ ಎಂಬ ಕಾಂಗ್ರೆಸ್‌ನ ಸುಳ್ಳುಗಳಿಗೆ ಮೋದಿ ಸೇರಿದಂತೆ ಪಕ್ಷದ ನಾಯಕರು ತಮ್ಮ ನಡವಳಿಕೆಗಳ ಮೂಲಕವೇ ಉತ್ತರ ನೀಡುತ್ತಿದ್ದಾರೆ ಎಂದರು.

ಎಸ್ಸಿ ಜನರಲ್ಲಿ ಅರಿವು ಹೆಚ್ಚಾಗುತ್ತಿದ್ದು ಕಾಂಗ್ರೆಸ್‌ನವರ ಸುಳ್ಳುಗಳಿಗೆ ಸೊಪ್ಪು ಹಾಕದೆ ಬಿಜೆಪಿ ಜೊತೆ ಕೈ ಜೋಡಿಸುವ ಕೆಲಸ ನಡೆಯುತ್ತಿದೆ. ಎಸ್ಸಿ ಜನಾಂಗವನ್ನು ಮೀಸಲಾತಿಗಷ್ಟೇ ಸೀಮಿತಗೊಳಿಸದೆ, ಬೇರೆ ರೀತಿಯಲ್ಲೂ ಪ್ರೋತ್ಸಾಹಿಸುವ ಅಗತ್ಯವಿದೆ ಎಂದರು.

ದಲಿತ ಮುಖಂಡರಿಗೆ ಬಿಜೆಪಿ ವಿರೋಧಿಸಲು ಸಕಾರಣಗಳೇ ಇಲ್ಲ. ಅನಗತ್ಯ ಟೀಕೆ ಮಾಡುವುದನ್ನು ನಿಲ್ಲಿಸಿ, ನಾವೆಲ್ಲರೂ ಒಂದೇ ಎಂಬ ಭಾವನೆಯಲ್ಲಿ ಪರಿಶಿಷ್ಟರು ಸಂಘಟಿತರಾಗಬೇಕು ಎಂದರು.

ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ, ಜಗಳೂರು ಶಾಸಕ ಎಸ್.ವಿ. ರಾಮಚಂದ್ರ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುನಿಕೃಷ್ಣ, ಮಾಜಿ ಶಾಸಕ ಬಸವರಾಜ ನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

# ಮಿಟ್ಲಕಟ್ಟೆ : ಜಿಲ್ಲಾಧಿಕಾರಿ ಮತದಾರರ ಮನೆಗಳಿಗೆ ಭೇಟಿ



ಹರಿಹರ, ಜ.6- ತಾಲ್ಲೂಕಿನ ಮಿಟ್ಲಕಟ್ಟೆ ಮತಗಟ್ಟೆ ಸಂಖ್ಯೆ 170 ಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಉಪವಿಭಾಗಾಧಿಕಾರಿ ಮಮತಾ ಹಿರೇಗೌಡರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಹೊಸದಾಗಿ ಸೇರಿರುವ ಮತದಾರರ ಮನೆಗಳಿಗೆ ಭೇಟಿ ನೀಡಿ ವಯಸ್ಸಿನ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿದರು. ಈ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಕ ಸಮೀರ್, ವಿ.ಎ. ಹೇಮಂತ್ ಕುಮಾರ್ ಬಿ.ಎಲ್.ಓ ಹಾಜರಿದ್ದರು.

# ಅನಿಲ್ ಅಂಬಾನಿ ಕಂಪನಿಯ ಖಾತೆಗಳಲ್ಲಿ ವಂಚನೆ

ನವದೆಹಲಿ, ಜ. 6 – ಅನಿಲ್ ಅಂಬಾನಿ ಒಡೆತನದ ಕಂಪನಿಗಳಾದ ರಿಲೈಯನ್ಸ್ ಕಮ್ಯುನಿಕೇಷನ್, ರಿಲೈಯ್ಸ್ ಟೆಲಿಕಾಂ ಹಾಗೂ ರಿಲೈಯನ್ಸ್ ಇನ್‌ಫ್ರಾಟೆಲ್ ಬ್ಯಾಂಕ್ ಖಾತೆಗಳು ವಂಚನೆಯವು ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಈ ಖಾತೆಗಳ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನ್ಯಾಯಾಲಯ ತಿಳಿಸಿದೆ. ಆದರೂ, ಸಹ ಬ್ಯಾಂಕ್ ಖಾತೆಗಳ ಕುರಿತು ತನಿಖೆ ನಡೆಸಬಹುದಾಗಿದೆ. ಇದು ಖಾತೆಗಳ ಸಿಬಿಐ ತನಿಖೆಗೂ ದಾರಿ ಮಾಡಿಕೊಡಬಹುದಾಗಿದೆ.

2016ರಲ್ಲಿ ಸುತ್ತೋಲೆ ಹೊರಡಿಸಿದ್ದ ರಿಸರ್ವ್ ಬ್ಯಾಂಕ್, ಖಾತೆಗಳು ವಂಚನೆಯವು ಎಂದು ಘೋಷಣೆ ಮಾಡಿತ್ತು. ಇದನ್ನು ಪ್ರಶ್ನಿಸಿ ರಿಲೈಯನ್ಸ್ ಕಮ್ಯುನಿಕೇಷನ್ ಮಾಜಿ ನಿರ್ದೇಶಕ ಪುನೀತ್ ಗಾರ್ಗ್ ಹೈಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ಅರ್ಜಿ ಸಲ್ಲಿಸಿರುವ ಬ್ಯಾಂಕ್, ಲೆಕ್ಕ ಪರಿಶೋಧನಾ ವಿಭಾಗದ ಪರಿಶೀಲನೆಯಲ್ಲಿ ಹಣದ ಅವ್ಯವಹಾರ ಬೆಳಕಿಗೆ ಬಂದಿದೆ ಎಂದು ತಿಳಿಸಿದೆ. ಅವ್ಯವಹಾರ ನಡೆದ ಸಂದರ್ಭದಲ್ಲಿ ಖಾತೆಗಳನ್ನು ವಂಚನೆ ಎಂದು ಗುರುತಿಸಲಾಗುತ್ತದೆ. ನಂತರ ಈ ವಿಷಯದ ಬಗ್ಗೆ ರಿಸರ್ವ್ ಬ್ಯಾಂಕ್‌ಗೆ ವರದಿ ನೀಡಲಾಗುತ್ತದೆ.

# ಹರಿಹರ : ನಿವೇಶನ ಹಂಚಿಕೆಗಾಗಿ ಅರ್ಜಿ ಆಹ್ವಾನ

ಹರಿಹರ,ಜ.6 - ಸಾರಥಿ-ಕುರುಬರಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಹಂಚಿಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ಹಿಂದೆ ಹನಗವಾಡಿ ಕೈಗಾರಿಕಾ ಪ್ರದೇಶ ದಲ್ಲಿ ಅರ್ಜಿ ಸಲ್ಲಿಸಿ ನಿವೇಶನ ಪಡೆಯದವರು ಸಾರಥಿ-ಕುರುಬರಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಪ.ಜಾತಿ/ಪ.ಪಂದವರಿಗೆ ಶೇ.22.65 ರಷ್ಟು ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗ ಪ್ರವರ್ಗ-1, 2-ಎ, ಅಂಗವಿಕಲರು/ಮಾಜಿ ಸೈನಿಕರು, ಶೇ.5 ರಷ್ಟು ಮೀಸಲಿರಿಸಿದ್ದು, ಉಳಿದಿದ್ದು ಸಾಮಾನ್ಯ ವರ್ಗದವರಿಗೆ ಆಯಾ ಮೀಸಲಾತಿಗಳಲ್ಲಿ ಶೇ.5 ರಷ್ಟು ಮಹಿಳೆಯರಿಗೆ ಸಹ ಕಾಯ್ದಿರಿಸಲಾಗಿದೆ. ಆಸಕ್ತ ಉದ್ಯಮಶೀಲರು ರೂ.250 ಅರ್ಜಿ ಶುಲ್ಕದ ಡಿ.ಡಿಯನ್ನು ಕೆಐಎಡಿಬಿ ದಾವಣಗೆರೆ ಇವರ ಹೆಸರಿಗೆ ತೆಗೆದು ಕೆಐಎಡಿಬಿಐ ಕಚೇರಿ, ದಾವಣಗೆರೆ ಇಲ್ಲಿಗೆ ಫೆ.10 ರೊಳಗೆ ಸಲ್ಲಿಸಬಹುದು.

ವಿವರಕ್ಕೆ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ದಾವಣಗೆರೆ ಅಥವಾ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ ಕಚೇರಿಗೆ ಸಲ್ಲಿಸಬಹುದು. ದೂರವಾಣಿ 08192-262001 ನ್ನು ಸಂಪರ್ಕಿಸಬಹುದು ಎಂದು ಕೇಂದ್ರದ ಜಂಟಿ ನಿರ್ದೇಶಕ ಜಯಪ್ರಕಾಶ್ ನಾರಾಯಣ ತಿಳಿಸಿದ್ದಾರೆ.

# ಚೆಸ್ ತರಬೇತಿ ಶಿಬಿರ

ದಾವಣಗೆರೆ,ಡಿ.6- ನಗರದ ಲಕ್ಷ್ಮಿ ಫ್ಲೋರ್ ಮಿಲ್ ಹಿಂಭಾಗದ ಎಸ್.ಎಸ್. ಬಡಾವಣೆ 'ಎ' ಬ್ಲಾಕ್ 2ನೇ ಮುಖ್ಯ ರಸ್ತೆಯಲ್ಲಿ ಚೆಸ್ ತರಬೇತಿ ಶಿಬಿರ ನಡೆಯಲಿದೆ. ಆರು ವರ್ಷ ಮೇಲ್ಪಟ್ಟ ಮಕ್ಕಳು ಭಾಗವಹಿಸಬಹುದು ಎಂದು ಸಂಚಾಲಕರಾದ ಶ್ರೀಮತಿ ನಿರ್ಮಲಾ ಸುಭಾಷ್ (98441-53466, 79757-54042) ತಿಳಿಸಿದ್ದಾರೆ.

# ಹರ ಜಾತ್ರೆ ವೈಚಾರಿಕ ವಿಚಾರ ಜಾತ್ರೆಯಾಗಲಿದೆ

## ಹರಪನಹಳ್ಳಿ ಸಭೆಯಲ್ಲಿ ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ



ಹರಪನಹಳ್ಳಿ, ಜ.6- 2ಎ ಮೀಸಲಾತಿ ದೊರಕಿಸಿಕೊಳ್ಳುವ ವಿಚಾರದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದ ಹರಿಹರ ಹಾಗೂ ಕೂಡಲ ಸಂಗಮ ಎರಡೂ ಪೀಠಗಳ ಉದ್ದೇಶವೂ ಒಂದೇ ಆಗಿದ್ದು, ಹೋರಾಟದ ವಿಧಾನ ಮಾತ್ರ ಬೇರೆ ಯಾಗಿವೆ ಎಂದು ವೀರಶೈವ ಲಿಂಗಾಯುತ ಪಂಚಮಸಾಲಿ ಹರಿಹರ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಸಮಾಜದ ಮುಖಂಡ ಮಂಜುನಾಥ ಪೂಜಾರ ಅವರ ನಿವಾಸದಲ್ಲಿ ಜರುಗಿದ ಸುದ್ದಿ ಗೋಷ್ಠಿಯಲ್ಲಿ ಅವರು ಮಾತನಾಡಿದರು. 2ಎ ಮೀಸಲಾತಿಗೆ ಮೊದಲು ಕುಲಶಾಸ್ತ್ರ ಅಧ್ಯಯನ ಆಗಬೇಕು. ಅಧ್ಯಯನ ನಡೆಸುವ ಸಂಬಂಧ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ಮನವಿ ಮಾಡಿದ್ದೇವೆ ಎಂದು ಹೇಳಿದರು.

ಇದೇ ದಿನಾಂಕ 14 ಮತ್ತು 15 ರಂದು ಹರಿಹರ ಪಂಚಮಸಾಲಿ ಪೀಠದಲ್ಲಿ ಹರ ಜಾತ್ರೆ ಆಯೋಜಿಸಿದ್ದೇವೆ. ಇದು ವೈಚಾರಿಕ ವಿಚಾರವುಳ್ಳ ಹರ ಜಾತ್ರೆ ಆಗಲಿದೆ. ಜಾತ್ರೆಯಲ್ಲಿ ಹರದ್ವಾರವನ್ನು ತುಮಕೂರಿನ ಸಿದ್ದಗಂಗಾ ಸ್ವಾಮೀಜಿ ಉದ್ಘಾಟಿಸುವರು ಎಂದರು.

ಭೂ ತಪಸ್ವಿ ಸಮಾವೇಶದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಪಾಲ್ಗೊಳ್ಳಲಿದ್ದು, ಸ್ವಾವಲಂಬಿ ಭಾರತ ಕಾರ್ಯಕ್ರಮದಲ್ಲಿ ಉಪಮುಖ್ಯ ಮಂತ್ರಿಗಳು, ಕೇಂದ್ರ ಸಚಿವರು, ಮಹಾರಾಷ್ಟ್ರ ವಿಪಕ್ಷ ನಾಯಕರು, ಭಾಗವಹಿಸುವರು. ಯುವ ರತ್ನ ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ, ಅಖಿಲ ಭಾರತ ಯುವ ಕಾಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ, ಸಂಸದ ಪ್ರಜ್ವಲ್ ರೇವಣ್ಣ ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದರು.

ತುಂಗಭದ್ರಾ ನದಿಯನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ವಿವೇಕಾನಂದ ಜಯಂತಿ ದಿನ ನದಿಯಲ್ಲಿ ಬೃಹತ್ ಸ್ವಚ್ಛತಾ ಕಾರ್ಯಕ್ರಮ ನಡೆಸುತ್ತೇವೆ ಎಂದರು.

ಹರ ಜಾತ್ರೆಗೆ ಕೂಡಲ ಸಂಗಮ ಪೀಠದ ಸ್ವಾಮೀಜಿಯವರನ್ನು ಆಹ್ವಾನಿಸುತ್ತೀರಾ? ಎಂಬ ಪ್ರಶ್ನೆಗೆ ವಚನಾನಂದ ಶ್ರೀಗಳು ಈ ವಿಚಾರವನ್ನು ನಮ್ಮ ರಾಜ್ಯ ಸಂಘದವರು ತೀರ್ಮಾನಿಸುತ್ತಾರೆ ಎಂದು ಉತ್ತರಿಸಿದರು. ಇತರೆ ಎಲ್ಲಾ ಸಮುದಾಯದ ಪೀಠಗಳ ಸ್ವಾಮೀಜಿಗಳವರು ನಾವು ಸ್ನೇಹಿತರಾಗಿದ್ದು, ಅವರವರ ಸಮುದಾಯದ ಅಭಿವೃದ್ಧಿ ಹೊತ್ತಿದ್ದರೂ, ಸಮುದಾಯ- ಸಮುದಾಯಗಳನ್ನು ಬೆಸೆಯುವ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳಿದರು.

ಹರ ಜಾತ್ರೆ ಸಮಿತಿ ಅಧ್ಯಕ್ಷ ಬಿ.ಲೋಕೇಶ್ ಮಾತನಾಡಿದರು. ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಪಟೇಲ್ ಬೆಟ್ಟನಗೌಡ, ತಾಲ್ಲೂಕು ಖಜಾಂಚಿ ಶಶಿಧರ ಪೂಜಾರ, ಜಿ.ಪಂ. ಸದಸ್ಯೆ ಸುವರ್ಣ ಆರುಂಡಿ ನಾಗರಾಜ, ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ, ವಕೀಲರುಗಳಾದ ಪ್ರಕಾಶ ಪಾಟೀಲ, ವಿರೂಪಾಕ್ಷಪ್ಪ, ಮುಖಂಡರಾದ ಪಿ.ಬಿ. ಗೌಡ, ಚಂದ್ರಶೇಖರ ಪೂಜಾರ, ಮಂಜುನಾಥ ಪೂಜಾರ, ಬಿ.ಟಿ.ಕೊಟ್ರೇಶ, ಮಹೇಶ ಪೂಜಾರ, ಪೂಜಾರ ಶೇಖರಪ್ಪ, ಯರಿಸ್ವಾಮಿ, ಬೇಲೂರು ಸಿದ್ದೇಶ್, ಬಸವರಾಜ ಮುಲಾಲಿ, ಪರಶೆಟ್ಟಿ, ಕರಿಬಸಪ್ಪ, ಕೊಟ್ರೇಶ್, ಶ್ಯಾನಭೋಗ್, ಸುರೇಶ್, ಚನ್ನನಗೌಡ, ಅರವಿಂದ ಜಿ. ಗುಂಡಗತ್ತಿ, ಬಂದೋಳ್ ಬಸವರಾಜ, ಗಿರೀಶ್ ಇನ್ನಿತರರಿದ್ದರು.

**ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಹರಪನಹಳ್ಳಿ**

**ಜಿ & ಡಬ್ಲೂಸಿ.ಸಂ. 26/2020**

**ಅರ್ಜಿದಾರರು :** 1. ಶ್ರೀ ಎಸ್. ಶಿವಕುಮಾರ ತಂದೆ ಎಲ್. ಶಂಕರಪ್ಪ ವಯಸ್ಸು 43 ವರ್ಷ, ವ್ಯವಹಾರ, ಕಮ್ಮತ್ತಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು. 2. ಅಲ್ಪವಯಿ ಕು. ಉಜ್ವಲ್ ಎಲ್.ಎಸ್ ತಂದೆ ಎಸ್. ಶಿವಕುಮಾರ ವಯಸ್ಸು 15 ವರ್ಷ, ಅಲ್ಪವಯಿ ಇದ್ದು 1ನೇ ಅರ್ಜಿದಾರನ ಸಂರಕ್ಷಣೆಯಲ್ಲಿ ಇರುತ್ತಾನೆ. ವಾಸ ಕಮ್ಮತ್ತಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು.

**ವಿರುದ್ಧ ಎದುರುದಾರರು :** ಯಾರೂ ಇಲ್ಲ

**ಸಮನ್ಸ್**

ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿದಾರರಾದ ಶ್ರೀ ಎಸ್.ಶಿವಕುಮಾರ ಇವರು ತನ್ನ ಖಾಸಾ ಮಗನಾದ ಅಲ್ಪವಯಿ ಕು. ಉಜ್ವಲ್ ಎಲ್.ಎಸ್ ಇವರ ಪರವಾಗಿ ಮೇಲ್ಕಂಡ ಪ್ರಕರಣದಲ್ಲಿ ಕು. ಉಜ್ವಲ್‌ನ ಮಾಲ್ಕಿ ಹಕ್ಕಿನ ಹೊಸಕೋಟೆ ಗ್ರಾಮದ ಜಮೀನು ಸರ್ವೇ ನಂ.450/2 ವಿಸ್ತೀರ್ಣ 3.77 ಎಕರೆ ಜಮೀನನ್ನು ಕ್ರಯಕ್ಕೆ ಕೊಟ್ಟು ಬಂದ ಕ್ರಯದ ಮೊತ್ತವನ್ನು ಆತನ ಯೋಗಕ್ಷೇಮಕ್ಕಾಗಿ ವಿನಿಯೋಗಿಸಲು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಗೆ ಯಾರಾದರೂ ಸಂಬಂಧಿಸಿದಂತೆ 2ನೇ ಅಲ್ಪವಯಿ ಅರ್ಜಿದಾರನ ಮೇಲೆ ತಿಳಿಸಿದ ಸ್ವತ್ತನ್ನು ಪರಭಾರೆ ಮಾಡುವುದಕ್ಕೆ ತಕರಾರು ಇದ್ದಲ್ಲಿ ತಾವು ಖುದ್ದಾಗಿ ಅಥವಾ ಅರ್ಜಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸುವಂತೆ ಸೂಚಿಸಲಾಗಿರುವ ಮತ್ತು ನಿಮ್ಮ ಪರವಾಗಿ ಸಮರ್ಥವಾಗಿ ಉತ್ತರಿಸುವ ವಕೀಲರ ಮೂಲಕ 2021ನೇ ವರ್ಷ ಫೆಬ್ರವರಿ ತಿಂಗಳು 11 ನೇ ದಿನದಂದು ಬೆಳಗ್ಗೆ 11-00 ಗಂಟೆಗೆ ಹಾಜರಾಗಲು ಮತ್ತು ನೀವು ಕ್ಲೇಮನ್ನು ವಿರೋಧಿಸುವಿರಾ ಅಥವಾ ವಿರೋಧಿಸುವುದಿಲ್ಲವೇ ಎಂಬುದನ್ನು ತಿಳಿಸಲು ಮತ್ತು ವಿರೋಧಿಸಿದ್ದಲ್ಲಿ ವಿಚಾರಣೆ ದಿನಾಂಕ ಮತ್ತು ಇತರೆ ವಿಷಯಗಳ ಬಗ್ಗೆ ನ್ಯಾಯಾಲಯದ ನಿರ್ದೇಶನಗಳನ್ನು ಪಡೆಯಲು ನಿಮಗೆ ಈ ಮೂಲಕ ಸಮನ್ಸ್ ಮಾಡಲಾಗಿದೆ.

ಕ್ಲೇಮನ್ನು ವಿರೋಧಿಸದ ಪಕ್ಷದಲ್ಲಿ ಅರ್ಜಿಯನ್ನು ಒಮ್ಮೆಗೆ ತೀರ್ಮಾನಿಸಲಾಗುವುದೆಂಬುದನ್ನು ಗಮನಿಸಿ, ಮೇಲೆ ನಮೂದಿಸಿದ ದಿನ ಮತ್ತು ಸಮಯದಲ್ಲಿ ನೀವು ಹಾಜರಾಗಲು ವಿಫಲರಾದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅರ್ಜಿ ವಿಚಾರಣೆ ಮಾಡಿ ತೀರ್ಮಾನಿಸಲಾಗುವುದೆಂಬುದನ್ನು ಗಮನಿಸಿ.

2021ನೇ ವರ್ಷ ಜನವರಿ ತಿಂಗಳು 04 ನೇ ದಿನದಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು,**
ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಹರಪನಹಳ್ಳಿ.

**(ಪಿ.ಜಗದೀಶ ಗೌಡ)**
ಅರ್ಜಿದಾರರ ಪರ ವಕೀಲರು

**ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಹರಪನಹಳ್ಳಿ**

**ಆರ್.ಎ.ಸಂ.14/2019**

**ಮೇಲ್ಮನವಿದಾರ** - ಶ್ರೀ ಈ.ಶಾಂತಪ್ಪ

**ವಿರುದ್ಧ ಎದುರುದಾರರು** - ಶ್ರೀ ಈ.ಲಕ್ಕಪ್ಪ ಮತ್ತು ಇತರೆ 7 ಜನ

6ನೇ ಎದುರುದಾರ ಶ್ರೀ.ಈ.ಕುಬೇರಪ್ಪ ತಂದೆ ಲಕ್ಕಪ್ಪ ವಯಸ್ಸು 39 ವರ್ಷ, ವಾಸ ತೊಗರಿಕಟ್ಟೆ ಗ್ರಾಮ, ಹರಪನಹಳ್ಳಿ ತಾಲ್ಲೂಕು.

**ಸಮನ್ಸ್**

ಮೇಲ್ಕಂಡ ನ್ಯಾಯಾಲಯದಲ್ಲಿ ಮೇಲ್ಮನವಿದಾರ ಹರಪನಹಳ್ಳಿ ಸಿವಿಲ್ ನ್ಯಾಯಾಲಯದ ಅಸಲು ದಾವೆ ಸಂ.120/2012ರ ದಿನಾಂಕ : 25-04-2019ರ ತೀರ್ಪು ಮತ್ತು ಡಿಕ್ರಿ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ 6ನೇ ಎದುರುದಾರ ಮೇಲ್ಕಂಡ ಮೇಲ್ಮನವಿಯಲ್ಲಿ ಹಾಜರಾಗಲು.

ಸದರಿ ಮೇಲ್ಮನವಿಯಲ್ಲಿ ಖುದ್ದಾಗಿ ಅಥವಾ ಮೇಲ್ಮನವಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸುವಂತೆ ಸೂಚಿಸಲಾಗಿರುವ ಮತ್ತು ನಿಮ್ಮ ಪರವಾಗಿ ಸಮರ್ಥವಾಗಿ ಉತ್ತರಿಸುವ ವಕೀಲರ ಮೂಲಕ 2021ನೇ ವರ್ಷ ಫೆಬ್ರವರಿ ತಿಂಗಳು 09ನೇ ದಿನದಂದು ಬೆಳಗ್ಗೆ 11-00 ಗಂಟೆಗೆ ಹಾಜರಾಗಲು ಮತ್ತು ನೀವು ಕ್ಲೇಮನ್ನು ವಿರೋಧಿಸುವಿರಾ ಅಥವಾ ವಿರೋಧಿಸುವುದಿಲ್ಲವೇ ಎಂಬುದನ್ನು ತಿಳಿಸಲು ಮತ್ತು ವಿರೋಧಿಸಿದ್ದಲ್ಲಿ ವಿಚಾರಣೆ ದಿನಾಂಕ ಮತ್ತು ಇತರೆ ವಿಷಯಗಳ ಬಗ್ಗೆ ನ್ಯಾಯಾಲಯದ ನಿರ್ದೇಶನಗಳನ್ನು ಪಡೆಯಲು ನಿಮಗೆ ಈ ಮೂಲಕ ಸಮನ್ಸ್ ಮಾಡಲಾಗಿದೆ.

ಕ್ಲೇಮನ್ನು ವಿರೋಧಿಸದ ಪಕ್ಷದಲ್ಲಿ ಮೇಲ್ಮನವಿಯನ್ನು ಒಮ್ಮೆಗೆ ತೀರ್ಮಾನಿಸಲಾಗುವುದೆಂಬುದನ್ನು ಗಮನಿಸಿ, ಮೇಲೆ ನಮೂದಿಸಿದ ದಿನ ಮತ್ತು ಸಮಯದಲ್ಲಿ ನೀವು ಹಾಜರಾಗಲು ವಿಫಲರಾದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಮೇಲ್ಮನವಿ ವಿಚಾರಣೆ ಮಾಡಿ ತೀರ್ಮಾನಿಸಲಾಗುವುದೆಂಬುದನ್ನು ಗಮನಿಸಿ.

2021ನೇ ವರ್ಷ ಜನವರಿ ತಿಂಗಳು 04 ನೇ ದಿನದಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು,**
ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಹರಪನಹಳ್ಳಿ.

**(ಪಿ.ಜಗದೀಶ ಗೌಡ)**
ಅರ್ಜಿದಾರರ ಪರ ವಕೀಲರು

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ನಿವೇಶನವನ್ನು ನನ್ನ ಕಕ್ಷಿಗಾರರಾದ **ಎಸ್.ಜೆ. ನವೀನ್ ಕುಮಾರ್ ಬಿನ್ ಶ್ರೀ ಸಂಸಿ ಜಯಣ್ಣ**, 1968/53, 1ನೇ ಮೇನ್, 1ನೇ ಕ್ರಾಸ್, ಎಸ್.ಎಸ್ ಲೇಔಟ್, 'ಬಿ' ಬ್ಲಾಕ್, ದಾವಣಗೆರೆ ಇವರು ಸದರಿ ನಿವೇಶನದ ಮಾಲೀಕರಾದ **ಶ್ರೀಮತಿ ಜಿ.ಎಸ್. ಗೀತಾ ಕೋಂ: ಲೇಟ್ ಶ್ರೀ ಗುರುಮೂರ್ತಿ, ಶ್ರೀ ಜಿ.ಎಸ್ ಶ್ರೀನಿವಾಸ, ಶ್ರೀ ಜಿ.ಎಸ್, ವಿದ್ಯಾಸಾಗರ್, ಶ್ರೀಮತಿ ಜಿ.ಎಸ್, ಪಲ್ಲವಿ, ಶ್ರೀ ರಾಮದಾಸ್ ಬಿನ್ ಎಸ್. ವೆಂಕಪ್ಪ, ಶ್ರೀಮತಿ ಪದ್ಮ ಎಸ್.ಆರ್, ಕೋಂ ಶ್ರೀ ರಾಮದಾಸ್, ಶ್ರೀ ನೀಲಕಂಠಪ್ಪ ಬಿನ್ ಎಸ್. ವೆಂಕಪ್ಪ, ದಾವಣಗೆರೆ, ಶ್ರೀಮತಿ ಎನ್.ಎಸ್, ನೀಲಾಂಬಿಕೆ ಕೋಂ ಶ್ರೀ ನೀಲಕಂಠಪ್ಪ, ಶ್ರೀ ಆಕಾಶ್ ಎನ್.ಎಸ್. ಬಿನ್ ಶ್ರೀ ನೀಲಕಂಠಪ್ಪ, ದಾವಣಗೆರೆ** ಇವರುಗಳೆಲ್ಲರಿಂದ ದಿನಾಂಕ 7-2-2019ರ ಜಿಪಿಎ ಸಂಖ್ಯೆ: 470/18-19 ರ ಮೂಲಕ ಅಧಿಕಾರ ಹೊಂದಿದ ಜಿಪಿಎ ಹೋಲ್ಡರ್ **ಶ್ರೀ ಶ್ರೀನಿವಾಸ ಹೆಚ್. ಬಿನ್ ಹನುಮಂತಪ್ಪ ಬಿ. ದಾವಣಗೆರೆ** ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ, ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀಮತಿ ಜಿ.ಎಸ್. ಗೀತಾ ಕೋಂ; ಲೇಟ್ ಶ್ರೀ ಗುರುಮೂರ್ತಿ, ಶ್ರೀ ಜಿ.ಎಸ್. ಶ್ರೀನಿವಾಸ, ಶ್ರೀ ಜಿ.ಎಸ್. ವಿದ್ಯಾಸಾಗರ್, ಶ್ರೀಮತಿ ಜಿ.ಎಸ್. ಪಲ್ಲವಿ, ಶ್ರೀ ರಾಮದಾಸ್ ಬಿನ್ ಎಸ್. ವೆಂಕಪ್ಪ, ಶ್ರೀಮತಿ ಪದ್ಮ ಎಸ್.ಆರ್, ಕೋಂ ಶ್ರೀ ರಾಮದಾಸ್, ಶ್ರೀ ನೀಲಕಂಠಪ್ಪ ಬಿನ್ ಎಸ್. ವೆಂಕಪ್ಪ, ದಾವಣಗೆರೆ, ಶ್ರೀಮತಿ ಎನ್.ಎಸ್. ನೀಲಾಂಬಿಕೆ ಕೋಂ ಶ್ರೀ ನೀಲಕಂಠಪ್ಪ, ಶ್ರೀ ಆಕಾಶ್ ಎನ್.ಎಸ್. ಬಿನ್ ಶ್ರೀ ನೀಲಕಂಠಪ್ಪ, ದಾವಣಗೆರೆ** ಇವರಿಂದ ಖರೀದಿಸುವ ಬಗ್ಗೆ ಯಾರದಾದರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 07 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಸದರಿ 07 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ 07 ದಿವಸಗಳ ಅವಧಿ ನಂತರ ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀಮತಿ ಜಿ.ಎಸ್. ಗೀತಾ ಕೋಂ: ಲೇಟ್ ಶ್ರೀ ಗುರುಮೂರ್ತಿ, ಶ್ರೀ ಜಿ.ಎಸ್. ಶ್ರೀನಿವಾಸ, ಶ್ರೀ ಜಿ.ಎಸ್, ವಿದ್ಯಾಸಾಗರ್, ಶ್ರೀಮತಿ ಜಿ.ಎಸ್. ಪಲ್ಲವಿ, ಶ್ರೀ ರಾಮದಾಸ್ ಬಿನ್ ಎಸ್. ವೆಂಕಪ್ಪ, ಶ್ರೀಮತಿ ಪದ್ಮ ಎಸ್.ಆರ್. ಕೋಂ ಶ್ರೀ ರಾಮದಾಸ್, ಶ್ರೀ ನೀಲಕಂಠಪ್ಪ ಬಿನ್ ಎಸ್. ವೆಂಕಪ್ಪ, ದಾವಣಗೆರೆ, ಶ್ರೀಮತಿ ಎನ್.ಎಸ್, ನೀಲಾಂಬಿಕೆ ಕೋಂ ಶ್ರೀ ನೀಲಕಂಠಪ್ಪ, ಶ್ರೀ ಆಕಾಶ್ ಎನ್.ಎಸ್. ಬಿನ್ ಶ್ರೀ ನೀಲಕಂಠಪ್ಪ, ದಾವಣಗೆರೆ** ಇವರಿಂದ ಅವರ ಜಿಪಿಎ ಹೋಲ್ಡರ್ ಮೂಲಕ ಷೆಡ್ಯೂಲ್ ನಿವೇಶನವನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ ಆಕ್ಷೇಪಣೆ ವಗೈರೆಗಳು ನನ್ನ ಕಕ್ಷಿಗಾರರನ್ನು ಪ್ರತಿಬಂಧಿಸುವುದಿಲ್ಲ ಹಾಗೂ ನನ್ನ ಕಕ್ಷಿಗಾರರು ಸದರಿ **ಶ್ರೀಮತಿ ಜಿ.ಎಸ್. ಗೀತಾ ಕೋಂ: ಲೇಟ್ ಶ್ರೀ ಗುರುಮೂರ್ತಿ, ಶ್ರೀ ಜಿ.ಎಸ್. ಶ್ರೀನಿವಾಸ, ಶ್ರೀ ಜಿ.ಎಸ್. ವಿದ್ಯಾಸಾಗರ್, ಶ್ರೀಮತಿ ಜಿ.ಎಸ್. ಪಲ್ಲವಿ, ಶ್ರೀ ರಾಮದಾಸ್ ಬಿನ್ ಎಸ್. ವೆಂಕಪ್ಪ, ಶ್ರೀಮತಿ ಪದ್ಮ ಎಸ್.ಆರ್, ಕೋಂ ಶ್ರೀ ರಾಮದಾಸ್, ಶ್ರೀ ನೀಲಕಂಠಪ್ಪ ಬಿನ್ ಎಸ್. ವೆಂಕಪ್ಪ, ದಾವಣಗೆರೆ. ಶ್ರೀಮತಿ ಎನ್.ಎಸ್. ನೀಲಾಂಬಿಕೆ ಕೋಂ ಶ್ರೀ ನೀಲಕಂಠಪ್ಪ, ಶ್ರೀ ಆಕಾಶ್ ಎನ್.ಎಸ್. ಬಿನ್ ಶ್ರೀ ನೀಲಕಂಠಪ್ಪ, ದಾವಣಗೆರೆ** ಇವರಿಂದ ಪಡೆದುಕೊಳ್ಳುವ ಶುದ್ದ ಕ್ರಯ ಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ, ತಿಳಿಯುವುದು.

**ಷೆಡ್ಯೂಲ್: ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕುಂದುವಾಡ ಗ್ರಾಮದ ರೀ ಸರ್ವೆ ನಂ.29/1ಬಿ, ವಿಸ್ತೀರ್ಣ 1.18 ಎಕರೆ, ರೀ ಸರ್ವೆ ನಂ.29/ಎ2 ವಿಸ್ತೀರ್ಣ 3.04 ಎಕರೆ, ರೀ ಸರ್ವೆ ನಂ.29/1ಸಿ, ವಿಸ್ತೀರ್ಣ 1.22 ಎಕರೆ, ಹೀಗೆ ಒಟ್ಟು 6.04 ಎಕರೆ ಪ್ರದೇಶ ದಾವಣಗೆರೆ ಜಿಲ್ಲಾಧಿಕಾರಿಗಳಿಂದ ಎಎಲ್ ಎನ್ /ಸಕಾಲ/ಸಿಆರ್/289/2013-14, ಎಎಲ್ ಎನ್ /ಸಕಾಲ/ ಎಸ್ ಆರ್ /215/2014-15 ದಿನಾಂಕ:30-12-2014ರ ಆದೇಶದ ಪ್ರಕಾರ ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿದ್ದು, ಈ ಒಟ್ಟು ಪ್ರದೇಶ ವಿಸ್ತೀರ್ಣ 6 ಎಕರೆ 4 ಗುಂಟೆಯಲ್ಲಿ ವಿಂಗಡಿಸಿರುವ ಸೈಟುಗಳ ಪ್ಲಾನನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರಿಂದ ದಿನಾಂಕ 3-10-2018 ಆದೇಶ ಸಂಖ್ಯೆ 268/13-14/3828/2016-17/1504 ಪ್ರಕಾರ ಜಂಟಿ ಕರಡು ವಸತಿ ವಿನ್ಯಾಸ ನಕ್ಷೆ ಅನುಮೋದನೆ ಹಾಗೂ ದಿನಾಂಕ 12-4-2019ರ ಆದೇಶ ಸಂಖ್ಯೆ 268/13-14/62/2016-17 ಪ್ರಕಾರ ಅಂತಿಮ ವಸತಿ ವಿನ್ಯಾಸ ನಕ್ಷೆ ಪಡೆದುಕೊಂಡಿದ್ದು, ಅದರಲ್ಲಿ ವಿಂಗಡಿಸಿರುವ ನಿವೇಶನಗಳ ಪೈಕಿ ನಿವೇಶನ ಸಂಖ್ಯೆ 63, ಅಳತೆ ಪೂರ್ವ-ಪಶ್ಚಿಮ 50' ಉತ್ತರ-ದಕ್ಷಿಣ 30 ಇದ್ದು ಇದಕ್ಕೆ ಚಕ್ಕುಬಂದಿ: ಪೂರ್ವ- 30 ಅಡಿ ರಸ್ತೆ, ಪಶ್ಚಿಮ – ನಿವೇಶನ ಸಂಖ್ಯೆ 46, ಉತ್ತರ - ನಿವೇಶನ ಸಂಖ್ಯೆ 62, ದಕ್ಷಿಣ - ನಿವೇಶನ ಸಂಖ್ಯೆ 64, ಈ ಮಧ್ಯದ ಒಂದು ನಿವೇಶನವನ್ನು ಮೇಲ್ಕಂಡ ನನ್ನ ಕಕ್ಷಿದಾರರು ಖರೀದಿಸುವವರಿದ್ದಾರೆ.**

ದಾವಣಗೆರೆ
ದಿನಾಂಕ: 06-01-2021

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್‌ಎಲ್.ಎಂ.
ವಕೀಲರು, ನಂ.5 & 6, 1ನೇ ಅಂತಸ್ತು,
ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್,
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು,
ಪಿ.ಬಿ. ರಸ್ತೆ, ದಾವಣಗೆರೆ-577006.

# ಗ್ರಾಮೀಣ ಕುಡಿಯುವ ನೀರಿನ ವ್ಯವಸ್ಥೆಗೆ ಜಂಟಿ ಸದನ ಸಮಿತಿ ಬಂದರೆ ನಿರ್ದಾಕ್ಷಿಣ್ಯ ಕ್ರಮ




ದಾವಣಗೆರೆ ಜ.6- ಜಿಲ್ಲೆಯಲ್ಲಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಸರ್ಕಾರ ಅನುದಾನ ನೀಡಲು ಮುಂದಾದರೂ ಅದನ್ನು ಸಮರ್ಪಕವಾಗಿ ಬಳಸಿ ಕೊಂಡು ಕಾರ್ಯಗತಗೊಳಿಸಲು ನಿಮಗೇನು ಕಷ್ಟ. ಕಾರ್ಯ ಗತವಾಗದಿದ್ದರೂ ಸುಮ್ಮನೇ ಸಭೆಗೆ ಮಾಹಿತಿ ನೀಡಬೇಕೆಂದು ಅಸಮರ್ಪಕ ಉತ್ತರ ನೀಡುವುದು ಸಲ್ಲ. ಬಡವರ ಕುಡಿಯುವ ನೀರಿನಲ್ಲಿ ಅನ್ಯಾಯ ಮಾಡುವುದು ನ್ಯಾಯವಲ್ಲ.

ನಗರದ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಇಂದು ಸಂಜೆ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯತ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿದರು.

ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಡಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯ ಇಲ್ಲದಿರುವ ಬಗ್ಗೆ ಮಾಹಿತಿ ಪಡೆದು ಅಸಮಾಧಾನ ವ್ಯಕ್ತಪಡಿಸುತ್ತಾ, ಸಂಬಂಧಿಸಿದ ಅಧಿಕಾರಿಗಳಿಗೆ ಚಾಟಿ ಬೀಸಿದರಲ್ಲದೇ, 2 ತಿಂಗಳ ಬಿಟ್ಟು ತಾವು ಬರುವುದರೊಳಗಾಗಿ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿಸುವಂತೆ ಖಡಕ್ ಎಚ್ಚರಿಕೆ ಸಹ ನೀಡಿದರು.

2020-21ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಮುಂದುವರೆದ ಕಾಮಗಾರಿಗಳ ಪ್ರಗತಿ ವರದಿ ಪರಿಶೀಲನೆ ವೇಳೆ ಸಚಿವ ಈಶ್ವರಪ್ಪ ಅಧಿಕಾರಿಗಳ ಮಾಹಿತಿ ಪಡೆಯುತ್ತಾ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ 12 ಕಾಮಗಾರಿಗಳಿಗೆ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ಕೇಳಲಾಗಿದೆ. ಈ ಕಾಮಗಾರಿಗಳಿಗೆ 11.17 ಕೋಟಿ ನಿಗದಿಪಡಿಸಲಾಗಿದೆ. ಈ ಪೈಕಿ 9 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಆದರೆ ಕೇವಲ 2.26 ಕೋಟಿ ವೆಚ್ಚ ಮಾಡಲಾಗಿದೆ ಎಂದು ವರದಿ ನೀಡಿದ್ದೀರಿ. ಹೀಗೆ ಸರ್ಕಾರದಿಂದ ಅನುದಾನ ನೀಡಿದರೂ ಏಕೆ ಬಳಸಿಕೊಂಡು ಕಾಮಗಾರಿ ಪೂರ್ಣಗೊಳಿಸಿಲ್ಲ. ಸಂಬಂಧಿಸಿದ ಕಂಟ್ರಾಕ್ಟರ್ ಕೆಲಸ ಮಾಡಿಯೂ ಆಗಿರುವ ಕಾಮಗಾರಿಗಳ ವೆಚ್ಚದ ಬಿಲ್ ಪಾವತಿಗೆ ಸಲ್ಲಿಸಿಲ್ಲವೇ? ಅಥವಾ ಕೆಲಸವೇ ಆಗಿಲ್ಲವೇ ಎಂದು ಪ್ರಶ್ನಿಸಿದರು.

## ಸಂಬಂಧಿಸಿದ ಅಧಿಕಾರಿಗಳಿಗೆ ಸಚಿವ ಈಶ್ವರಪ್ಪ ಖಡಕ್ ಎಚ್ಚರಿಕೆ

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಕಾರ್ಯಪಾಲಕ ಅಭಿಯಂತರ ನಾಗಪ್ಪ ಮಾತನಾಡಿ, ಗ್ರಾಮೀಣ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಡಿ 726 ಕಾಮಗಾರಿಗಳಿಗೆ 72.94 ಕೋಟಿ ಅನುದಾನ ಕೇಳಿದ್ದು, ಈವರೆಗೆ 604 ಕಾಮಗಾರಿಗಳು ಪೂರ್ಣಗೊಂಡಿವೆ. 23.77 ಕೋಟಿ ವೆಚ್ಚ ಮಾಡಲಾಗಿದೆ. 119 ಕಾಮಗಾರಿ ಪ್ರಗತಿಯಲ್ಲಿವೆ. ಹಲವು ಕಾಮಗಾರಿಗಳ ಭೌತಿಕ ಪ್ರಗತಿ ಆಗಿದ್ದು ಆರ್ಥಿಕ ಪ್ರಗತಿ ಆಗಬೇಕಿದೆ ಎಂದರು.

ಸಚಿವರು ಪ್ರತಿಕ್ರಿಯಿಸಿ, ಇತರೆ ಇಲಾಖೆಗಳಲ್ಲಿ ಅನುದಾನದ ಕೊರತೆ ಇದೆ. ನಮ್ಮ ಇಲಾಖೆಯಲ್ಲಿ ಅನುದಾನದ ಕೊರತೆ ಇಲ್ಲ. ಭೌತಿಕವಾಗಿ ಕೆಲಸವಾಗಿಯೂ ಕಂಟ್ರಾಕ್ಟರ್ ಬಿಲ್ ನೀಡಿಲ್ಲವೇ?. ಹೀಗೆ ಕೆಲಸ ಮಾಡಿಯೂ ಬಿಲ್ ಕೇಳದ ಕಂಟ್ರಾಕ್ಟರ್ ಇರಲು ಸಾಧ್ಯವಿಲ್ಲ. ಅಂತಹ ದಾನ ಶೂರ ಕರ್ಣರು ದಾವಣಗೆರೆಯಲ್ಲಿ ಮಾತ್ರವೇ ಇದ್ದಾರೆಯೇ?. ಹೀಗೆ ಸುಳ್ಳು ಉತ್ತರ ನೀಡಬೇಡಿ. ನಾವು ವರ್ಷಕ್ಕೋ, ಆರು ತಿಂಗಳಿಗೋ, ತಿಂಗಳಿಗೋ ಬಂದು ಹೋಗುತ್ತೇವೆ. ಇಲ್ಲೇ ಇರುವ ನೀವು ಜನರ ಋಣ ತೀರಿಸುವ ಕೆಲಸ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರಲ್ಲದೇ, ಕಂಟ್ರಾಕ್ಟರ್ ಕರೆಯಿಸಿ ವಿಚಾರಣೆ ಮಾಡುವಂತೆ ಹಾಗೂ ಮಾರ್ಚ್ ಒಳಗೆ ನಿಗದಿತ ಗುರಿ ಸಾಧಿಸುವಂತೆ ಜಿಲ್ಲಾ ಪಂಚಾಯತ್ ಸಿಇಓ ಪದ್ಮ ಬಸವಂತಪ್ಪ ಅವರಿಗೂ ತಾಕೀತು ಮಾಡಿದರು.

ಜಿಲ್ಲೆಯಲ್ಲಿ 793 ಶುದ್ದ ಕುಡಿಯುವ ನೀರಿನ ಘಟಕಗಳ ಪೈಕಿ 774 ಸುಸ್ಥಿತಿಯಲ್ಲಿದ್ದು ಕೆಲಸ ನಿರ್ವಹಿಸುತ್ತಿವೆ. 17 ಕೆಲಸ ಮಾಡುತ್ತಿಲ್ಲವೆಂದು ವರದಿ ನೀಡಿದ್ದೀರಿ. ಆದರೆ ಸದನಗಳಲ್ಲಿ ಈ ಘಟಕಗಳ ಬಗ್ಗೆಯೇ ಹೆಚ್ಚಿನ ದೂರು ಇದೆ. ಆದ್ದರಿಂದಲೇ ಇವುಗಳನ್ನು ಪರಿವೀಕ್ಷಿಸಿ ಕ್ರಮ ಕೈಗೊಳ್ಳಲು ಜಂಟಿ ಸದನ ಸಮಿತಿ ರಚನೆಯಾಗಿದ್ದು, ಗ್ರಾಮೀಣ ಕುಡಿಯುವ ನೀರು, ಶುದ್ದ ಕುಡಿಯುವ ನೀರಿನ ಘಟಕಗಳಿಗೆ ಸಂಬಂಧಿಸಿದಂತೆ ಪರಿವೀಕ್ಷಣೆಗೆ ಈ ಸಮಿತಿ ಬರಲಿದ್ದು, ಈ ರೀತಿ ಲೋಪದೋಷಗಳು ಆಗ ಕಂಡು ಬಂದರೆ ಅವರು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಿದ್ದಾರೆ. ಆದ್ದರಿಂದ ಗ್ರಾಮೀಣ ಭಾಗದ ಬಡವರ ಕುಡಿಯುವ ನೀರಿಗೆ ಅನ್ಯಾಯವಾಗದಂತೆ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಬೇಕು ಹಾಗೂ ಕಾಮಗಾರಿ ಪ್ರಗತಿ ಕುರಿತು ಸಮರ್ಪಕವಾದ, ವಾಸ್ತವಿಕ ವರದಿಯನ್ನು ಅಧಿಕಾರಿಗಳು ನೀಡಬೇಕು. ಇನ್ನೊಮ್ಮೆ ಇವುಗಳನ್ನು ಪರೀಕ್ಷಿಸಿ ನೈಜ ವರದಿ ನೀಡಬೇಕೆಂದು ಜಿಲ್ಲಾ ಪಂಚಾಯತ್ ಸಿಇಓಗೆ ಸೂಚಿಸಿದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಕಾರ್ಯಪಾಲಕ ಅಭಿಯಂತರ ನಾಗಪ್ಪ ಮಾತನಾಡಿ, ಜಿಲ್ಲೆಯಲ್ಲಿ ಬಹುಗ್ರಾಮ ಯೋಜನೆಯಡಿ ಒಟ್ಟು 28 ಕಾಮಗಾರಿಗಳು ಪೂರ್ಣಗೊಂಡಿದ್ದು, 3 ಪ್ರಗತಿಯಲ್ಲಿವೆ. 1 ಹೊಸದಾಗಿ ಪ್ರಸ್ತಾಪಿಸಲಾಗಿದೆ. ಈ ಪೈಕಿ ಕೊಂಡಜ್ಜಿ ಬಿಟ್ಟು ಉಳಿದೆಲ್ಲೆಡೆ ಕಾರ್ಯ ನಿರ್ವಹಿಸುತ್ತಿವೆ.

ಪ್ರಗತಿಯಲ್ಲಿರುವ ಆನಗೋಡು ಮತ್ತು ಇತರೆ 18 ಗ್ರಾಮ ಹಿರೇಕೋಗಲೂರು ಮತ್ತು ಇತರೆ 22 ಗ್ರಾಮ, ಹೊಟ್ಯಾಪುರ ಮತ್ತು ಇತರೆ 11 ಗ್ರಾಮಗಳಲ್ಲಿ ಮಾರ್ಚ್ ಅಂತ್ಯಕ್ಕೆ ಕಾಮಗಾರಿ ಪೂರ್ಣಕ್ಕೆ ಗುರಿ ಇದೆ ಎಂದರು.

### 370 ಗ್ರಾಮಗಳ ಮನೆಗಳಿಗೆ ಕುಡಿಯುವ ನೀರು

ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ಮಾತನಾಡಿ, ಜಲಜೀವನ ಮಿಷನ್ ಅಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 714 ಗ್ರಾಮಗಳ ಪೈಕಿ 370 ಗ್ರಾಮಗಳ ಮನೆಗಳಿಗೆ ಕುಡಿಯುವ ನೀರನ್ನು ನೀಡುವ ಯೋಜನೆ ಹಾಕಿಕೊಂಡಿದ್ದು, 220 ಗ್ರಾಮಗಳಿಗೆ ಡಿಪಿಆರ್ ತಯಾರಿಸಲಾಗಿದೆ.

181 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಕೆಲವೆಡೆ ಟೆಂಡರ್‌ದಾರರು ಮುಂದೆ ಬರದ ಕಾರಣ, ಮರು ಟೆಂಡರ್ ಕರೆಯಲಾಗಿದ್ದು, 6 ಕಡೆ ಕೆಲಸ ಆರಂಭಿಸಲಾಗಿದೆ ಎಂದರು.

ಇದಕ್ಕೆ ಸಚಿವರು ಪ್ರತಿಕ್ರಿಯಿಸಿ, ಸಿಇಓ ಅವರು ಜಿಲ್ಲೆಯಲ್ಲಿನ ಉತ್ತಮ ಕಂಟ್ರಾಕ್ಟರ್ ದಾರರ ಕರೆಯಿಸಿ ಯೋಜನೆ ಬಗ್ಗೆ ವಿವರಿಸಿ ತಿಳಿಸಿ ಹೇಳಬೇಕೆಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕಳೆದ 10 ವರ್ಷಗಳಿಂದ ಸಂತೆಮುದ್ದಾಪುರ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ನೆನೆಗುದಿಗೆ ಬಿದ್ದಿದ್ದು, ಇದೀಗ 175 ಹಳ್ಳಿಗಳನ್ನು ಒಳಗೊಳ್ಳುವ ಯೋಜನೆ ತಯಾರಾಗಿದೆ. ಆದಷ್ಟು ಬೇಗ ಈ ಯೋಜನೆಗೆ ಅನುಮೋದನೆ ನೀಡುವಂತೆ ಕೋರಿದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಜಗಳೂರು ತಾಲ್ಲೂಕಿನಲ್ಲಿಯೂ ಅನೇಕ ಕಡೆ ಶುದ್ದ ಕುಡಿಯುವ ನೀರಿನ ಘಟಕಗಳು ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಸಂಬಂಧಿಸಿದ ಅಭಿಯಂತರರು ಕ್ರಮ ಕೈಗೊಳ್ಳಬೇಕೆಂದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ಮಾತನಾಡಿ, ಸಂತೆಮುದ್ದಾಪುರ ಯೋಜನೆಯು 2-3 ಬಾರಿ ಪರಿಷ್ಕೃತವಾಗಿ ಇದೀಗ 275 ಕೋಟಿ ವೆಚ್ಚದಲ್ಲಿ 175 ಹಳ್ಳಿಗಳಿಗೆ ನೀರು ಒದಗಿಸುವ ಯೋಜನೆ ಸಿದ್ದವಾಗಿದ್ದು, ಈ ಬಗ್ಗೆ ಮುಖ್ಯ ಅಭಿಯಂತರರ ಬಳಿ ಚರ್ಚೆ ನಡೆಸಲಾಗುವುದು ಎಂದರು.

ಸಭೆಯಲ್ಲಿ ಶಾಸಕ ಎಸ್.ಎ.ರವೀಂದ್ರನಾಥ್, ಜಿ.ಪಂ. ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ, ಉಪಾಧ್ಯಕ್ಷೆ ಸಾಕಮ್ಮ ಗಂಗಾಧರನಾಯ್ಕ, ಜಿಲ್ಲಾ ಪಂಚಾಯತ್ ಸದಸ್ಯ ಮಹೇಶ್, ಸಿಇಓ ಪದ್ಮಾ ಬಸವಂತಪ್ಪ, ಉಪ ಕಾರ್ಯದರ್ಶಿ ಆನಂದ್ ಮತ್ತಿತರರು ಉಪಸ್ಥಿತರಿದ್ದರು.

# ವೀರಶೈವ ಲಿಂಗಾಯತರನ್ನು ಒಬಿಸಿ ಪಟ್ಟಿಗೆ ಸೇರ್ಪಡೆಗೊಳಿಸಲಿ




ದಾವಣಗೆರೆ, ಜ.6- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ಮಹಾಂತೇಶ ಪಾಟೀಲ್ ಅವರು ನಗರದ ಶ್ರೀಶೈಲ ಮಠದಲ್ಲಿ ಯುವ ಘಟಕದ ಸದಸ್ಯರೊಂದಿಗೆ ಸಭೆ ನಡೆಸಿ ಸಂಘಟನೆ ಹಾಗೂ ಮುಂದಿನ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಿದರು.

ಶೇ. 38 ರಷ್ಟು ಜನಸಂಖ್ಯೆ ಹೊಂದಿರುವ ನಮ್ಮ ಸಮಾಜ ಹರಿದು ಹಂಚಿಹೋಗಿದ್ದು, ಅದನ್ನು ಸಂಘಟಿಸಲು ಯುವ ಘಟಕ ತನ್ನ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ ಎಂದು ಕರೆ ನೀಡಿದರು.

ರಾಷ್ಟ್ರೀಯ ಯುವ ಘಟಕದ ಪ್ರಧಾನ ಕಾರ್ಯದರ್ಶಿ ನಿಖಿಲ್ ಕೊಂಡಜ್ಜಿ ಮಾತನಾಡಿ, ವೀರಶೈವ ಲಿಂಗಾಯತ ಸಮಾಜವನ್ನು ಕೇಂದ್ರ ಒಬಿಸಿಗೆ ಸೇರಿಸಿದರೆ ಸಮಾಜದ ಯುವಕರುಗಳಿಗೆ ಉದ್ಯೋಗ, ವಿದ್ಯಾಭ್ಯಾಸದಲ್ಲಿ ಪ್ರಾತಿನಿಧ್ಯ ಸಿಗಲಿದ್ದು, ಐಎಎಸ್, ಐಪಿಎಸ್ ನಂತಹ ಹುದ್ದೆಗಳಿಗೆ ನಮ್ಮ ಸಮಾಜದ ಯುವಕರು ಅವಕಾಶ ಪಡೆಯುವುದು ಸಾಧ್ಯವಾಗಲಿದೆ.

ಈ ಸಂಬಂಧ ಕೇಂದ್ರದ ಮೇಲೆ ಒತ್ತಡ ತರುವ ಕೆಲಸ ಮಾಡಬೇಕಿದೆ ಎಂದರು.

## ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ಮಹಾಂತೇಶ ಪಾಟೀಲ್ ಆಗ್ರಹ

ಜಿಲ್ಲಾ ಯುವ ಘಟಕದ ಅಧ್ಯಕ್ಷ ಆರ್.ಟಿ. ಪ್ರಶಾಂತ್ ಮಾತನಾಡಿ, ಧಾರವಾಡದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ 10,000 ಯುವಕರನ್ನು ಕರೆತರುವ ಭರವಸೆ ನೀಡಿದರು. ನಗರ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ ಮಾತನಾಡಿ, ನೂತನ ರಾಷ್ಟ್ರೀಯ ಅಧ್ಯಕ್ಷರಿಗೆ ಯುವ ಘಟಕದ ಸಂಘಟನೆಯಲ್ಲಿ ಪೂರ್ಣ ರೀತಿಯ ಸಹಕಾರ ನೀಡುವ ಭರವಸೆ ನೀಡಿದರು.

ರಾಷ್ಟ್ರೀಯ ಉಪಾಧ್ಯಕ್ಷ ಸಂದೀಪ್ ಅಣಬೇರು, ಗೋಪಾಲ ಗೌಡ, ಸಿದ್ದು ಚೌಕ, ದಾವಣಗೆರೆ ತಾಲ್ಲೂಕು ಅಧ್ಯಕ್ಷ ನವೀನ್ ಕೋಡಿಹಳ್ಳಿ, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಶಿವನಗೌಡ ಪಾಟೀಲ ಇನ್ನಿತರರಿದ್ದರು.

# ಅಂತರ ಜಿಲ್ಲಾ ಲೆದರ್ ಬಾಲ್ ಕ್ರಿಕೆಟ್ ಟೂರ್ನಿ

ದಾವಣಗೆರೆ, ಜ.6- ಮಯೂರ ಕ್ರಿಕೆಟ್ ಕ್ಲಬ್ ಆಶ್ರಯದಲ್ಲಿ ನಗರದಲ್ಲಿ ಇದೇ ದಿನಾಂಕ 14ರಿಂದ 20ರವರೆಗೆ 16 ವರ್ಷದೊಳಗಿನ ಬಾಲಕರ ಅಂತರ ಜಿಲ್ಲಾ ಲೆದರ್ ಬಾಲ್ ಕ್ರಿಕೆಟ್ ಟೂರ್ನಿ ನಡೆಯಲಿದೆ.

ಎಂಬಿಎ ಕಾಲೇಜು ಮೈದಾನ ಹಾಗೂ ಜಿಲ್ಲಾ ಕ್ರೀಡಾಂಗಣದಲ್ಲಿ 6 ದಿನಗಳ ಈ ಕ್ರಿಕೆಟ್ ಟೂರ್ನಿಗೆ ಇದೇ ದಿನಾಂಕ 14ರಂದು ಎಂಬಿಎ ಕಾಲೇಜು ಮೈದಾನದಲ್ಲಿ ಬೆಳಿಗ್ಗೆ 9.30ಕ್ಕೆ ಚಾಲನೆ ನೀಡಲಾಗುವುದು ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ, ತುಮ ಕೂರು, ಬಿಜಾಪುರ ಜಿಲ್ಲೆಗಳು ಸೇರಿ ಒಟ್ಟು 6 ಆಹ್ವಾನಿತ ತಂಡಗಳ 90 ಮಂದಿ ರಾಜ್ಯ ವಲಯ ಮಟ್ಟದಲ್ಲಿ ಸ್ಪರ್ಧಿಸಿದ ಮತ್ತು ರಾಜ್ಯ ಪ್ರತಿನಿಧಿಸಿದ ಕ್ರೀಡಾಪಟುಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿದ್ದು, ಹೊರ ಜಿಲ್ಲೆಗಳಿಂದ ಬರುವ ಕ್ರೀಡಾಪಟುಗಳಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ರಾಬಿನ್ ರೌಂಡ್ ಮಾದರಿಯಲ್ಲಿ ಪಂದ್ಯಾವಳಿ ನಡೆಯಲಿದ್ದು, 6 ತಂಡಗಳು ತಲಾ ಒಂದು ಪಂದ್ಯ ಆಡಲಿವೆ. ನಂತರ ಹೆಚ್ಚು ಅಂಕ ಪಡೆದ ತಂಡಗಳ ಮಧ್ಯೆ ಸೆಮಿಫೈನಲ್ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಯೂರ ಕ್ರಿಕೆಟ್ ಕ್ಲಬ್‌ನ ಹುಚ್ಚವ್ವನಹಳ್ಳಿ ಮಂಜುನಾಥ್, ಫಣಿಯಾಪುರ ಪ್ರಭು, ತರಬೇತುದಾರರಾದ ತಿಮ್ಮೇಶ್, ಬಸವರಾಜ್ ಇದ್ದರು.

# ಸನಾತನ, ಪ್ರಗತಿಪರ ಚಿಂತನೆಯ, ಮರುಸೃಷ್ಠಿ ಜಾಹಿರಾತು ಪ್ರಕಟಣೆ

## ಬಸವ ಬಳಗ ಖಂಡನೆ

ದಾವಣಗೆರೆ, ಜ.6- ರಾಜ್ಯ ಸರ್ಕಾರವು ವಿವಿಧ ದಿನಪತ್ರಿಕೆಗಳ ಮುಖಪುಟದಲ್ಲಿ ಇಂದು ನೀಡಿರುವ ಜಾಹೀರಾತಿನಲ್ಲಿ ಕೆಲ ಅಂಶಗಳ ಕುರಿತಂತೆ ಪ್ರಕಟಿಸಿರುವುದನ್ನು ನಗರದ ಬಸವ ಬಳಗ ತೀವ್ರವಾಗಿ ಖಂಡಿಸಿದೆ.

'ಸನಾತನ, ಪ್ರಗತಿಪರ, ಚಿಂತನೆಯ, ಮರುಸೃಷ್ಠಿ' ಏನಿದರ ಅರ್ಥ? ಎಂದು ಬಸವ ಬಳಗ ಪ್ರಶ್ನಿಸಿದೆ.

ಇಂದು ನಮಗೆ ಸನಾತನ ಅನುಭವ ಮಂಟಪದ ಅವಶ್ಯಕತೆ ಇಲ್ಲ. ನಮಗೆ ಇನ್ನೊಂದು ಸ್ಥಾವರದ ಅವಶ್ಯಕತೆಯೂ ಇಲ್ಲ. ನಮಗೆ ಬೇಕಿರುವುದು ಬಸವ ಚಿಂತನೆಗಳನ್ನು ಅಳವಡಿಸಲು, ಚರ್ಚಿಸಲು, ಬಸವಾದಿ ಶರಣರ, ಪ್ರಗತಿಪರರ ಚಿಂತನೆಗಳನ್ನು ಜೀವಂತವಾಗಿಡಲು ಅನುಭವ ಮಂಟಪ ಬೇಕಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಸನಾತನ ಪ್ರಗತಿಪರ ಚಿಂತನೆಗಾಗಿ ಸ್ಥಳ ಬೇಕಿಲ್ಲ. ಇಂತಹ ಸನಾತನ ಚಿಂತನೆಯನ್ನು 850 ವರ್ಷಗಳ ಹಿಂದೆಯೇ ನಮ್ಮ ಶರಣರು ತಿರಸ್ಕರಿಸಿದ್ದಾರೆ. ನೀವು ಬಸವಣ್ಣನವರನ್ನು ಹಿಂದೂ ಧರ್ಮದ ಒಬ್ಬ ಪ್ರಗತಿಪರ ಚಿಂತಕ ಎಂದು ಬಿಂಬಿಸಲು ತಾವು ಮಾಡುತ್ತಿರುವ ಪ್ರಯತ್ನವನ್ನು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ.

# ಸಾರ್ವಕಾಲಿಕ ಹೆಚ್ಚಿನ ಹಂತದ ಹತ್ತಿರಕ್ಕೆ ಪೆಟ್ರೋಲ್ ಬೆಲೆ

ನವದೆಹಲಿ, ಜ. 6 – ಪೆಟ್ರೋಲ್ ಬೆಲೆ ಬುಧವಾರ ಲೀಟರ್‌ಗೆ 26 ಪೈಸೆ ಹೆಚ್ಚಾಗಿದ್ದು, ಸಾರ್ವಕಾಲಿಕ ಹೆಚ್ಚಿನ ಮಟ್ಟಕ್ಕೆ ತಲುಪಿದೆ. ಡೀಸೆಲ್ ಬೆಲೆ ಸಹ ಲೀಟರ್‌ಗೆ 25 ಪೈಸೆಯಷ್ಟು ಹೆಚ್ಚಾಗಿದೆ.

ಪೆಟ್ರೋಲ್ ಬೆಲೆ ದೆಹಲಿಯಲ್ಲಿ 83.97 ರೂ. ಹಾಗೂ ಡೀಸೆಲ್ ಬೆಲೆ 83.71 ರೂ.ಗಳಿಗೆ ತಲುಪಿದೆ. ಬಹುತೇಕ ಒಂದು ತಿಂಗಳ ನಂತರ ಪೆಟ್ರೋಲ್ ಬೆಲೆ ಏರಿಕೆ ಮಾಡಲಾಗಿದೆ. ಇದರಿಂದಾಗಿ ಪೆಟ್ರೋಲ್ ಬೆಲೆ ಸಾರ್ವ ಕಾಲಿಕ ದಾಖಲೆಯ ಹಂತಕ್ಕೆ ಬರುತ್ತಿದೆ. ಈ ಹಿಂದೆ ಅಕ್ಟೋಬರ್ 4, 2018ರಂದು ಪೆಟ್ರೋಲ್ ಬೆಲೆ ದೆಹಲಿಯಲ್ಲಿ 84 ರೂ. ಆಗಿದ್ದು ದಾಖಲೆಯಾಗಿತ್ತು. ಮೇ 2020ರ ನಂತರ ಪೆಟ್ರೋಲ್ ಬೆಲೆ ಲೀಟರ್‌ಗೆ 14.28 ರೂ. ಹಾಗೂ ಡೀಸೆಲ್ ಬೆಲೆ 11.83ರೂ.ಗಳಷ್ಟು ಹೆಚ್ಚಾಗಿದೆ.

## ಆನಗೋಡಿನ ಪೇಂಟ್ ಅಂಗಡಿಯಲ್ಲಿ ಕಳ್ಳತನ

ದಾವಣಗೆರೆ ಜ.6- ಅಂಗಡಿಯೊಂದಕ್ಕೆ ಕನ್ನ ಹಾಕಿರುವ ಕಳ್ಳರು, 4.19 ಲಕ್ಷ ರೂ. ಮೌಲ್ಯದ ಚಿನ್ನಾಭರಣ ದೋಚಿರುವ ಘಟನೆ ಆನಗೋಡು ಗ್ರಾಮದಲ್ಲಿ ಮೊನ್ನೆ ನಡೆದಿದೆ. ವೈ.ಎಸ್. ಟ್ರೇಡರ್ಸ್ ಹೆಸರಿನ ಪೇಂಟ್ ಅಂಗಡಿ ಯಲ್ಲಿ ಮಾಲೀಕ ಕೆ.ಎನ್. ಶಿವರಾಜ್ ಅವರು ತಮ್ಮ ತಾಯಿಯ ಒಡವೆಗಳನ್ನು ಅಂಗಡಿ ಡ್ರಾನಲ್ಲಿ ಟ್ಟಿದ್ದರು. ಅಂಗಡಿಗೆ ಬೀಗ ಹಾಕಿ ಮನೆಗೆ ತೆರಳಿದ್ದ ಸಂದರ್ಭದಲ್ಲಿ ಈ ಕೃತ್ಯ ನಡೆದಿದೆ.

**ದಿನದ ಚುಟುಕು**

ಆತುರದಲ್ಲಿ ಸೋಲಿದೆ
ತಾಳ್ಮೆಯಲ್ಲಿ ಗೆಲುವಿದೆ
ಅರಿವಿನಲ್ಲಿ ಸುಖವಿದೆ
ಕೊರತೆಯಲ್ಲಿ ನೋವಿದೆ.

- ವೀಕೆಎಂ

## ಕಾಣೆಯಾಗಿದ್ದಾರೆ



ಹರಿಹರ ತಾ. ಮಲೇಬೆನ್ನೂರು ಪಟ್ಟಣದ ಇಂದಿರಾ ನಗರದ ವಾಸಿ ಶ್ರೀಮತಿ ಓಂಕಾರಮ್ಮ (85) ಇವರು ದಿನಾಂಕ 4.1.2021ರ ಸೋಮವಾರ ಮಧ್ಯಾಹ್ನ 2.45 ರಿಂದ ಮಲೇಬೆನ್ನೂರಿನಿಂದ ಕಾಣೆಯಾಗಿದ್ದಾರೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕಾಗಿ ವಿನಂತಿ.

**ಪಾಳೇಗಾರ್ ನಾಗರಾಜ್**
**98455 92733** ಅಥವಾ
ಮಲೇಬೆನ್ನೂರು ಪೊಲೀಸ್ ಠಾಣೆ
**08192-268758**


## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ, ಎ ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮೀ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗು ಸುತ್ತಮುತ್ತ ಪ್ರದೇಶಗಳು, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ, ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.






# ಕೊಂಡಜ್ಜಿ ಕೆರೆ ಅರಣ್ಯ ಪ್ರದೇಶವನ್ನು ಜೀವ ವೈವಿಧ್ಯ ತಾಣ ಎಂದು ಘೋಷಿಸಲು ಶಿಫಾರಸ್ಸು



ದಾವಣಗೆರೆ ಜ.6 - ಕೊಂಡಜ್ಜಿ ಕೆರೆ ಅರಣ್ಯ ಪ್ರದೇಶವನ್ನು ಪಾರಂಪರಿಕ ಜೀವ ವೈವಿಧ್ಯ ತಾಣ ಎಂದು ನಿರ್ಣಯ ಕೈಗೊಳ್ಳಲು ಶಿಫಾರಸ್ಸು ಮಾಡುತ್ತೇನೆ ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಅವರು ತಿಳಿಸಿದ್ದಾರೆ.

ಅರಣ್ಯ ಅಧಿಕಾರಿಗಳು ಪರಿಸರ ತಜ್ಞರ ಜೊತೆ ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ಕೆರೆ ಪ್ರದೇಶಕ್ಕೆ ನಿನ್ನೆ ಸಂಜೆ ಭೇಟಿ ನೀಡಿದ ಅವರು, ಕೆರೆ ಮತ್ತು ಅರಣ್ಯ ಪ್ರದೇಶ ಮಲಿನವಾಗಿಲ್ಲ. ಅರಣ್ಯ ನಾಶವಾಗದೇ ಉಳಿದಿದೆ. ಈ ಬಗ್ಗೆ ಕೊಂಡಜ್ಜಿ ಗ್ರಾಮದ ಜನರನ್ನು ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿಯನ್ನು ಅಶೀಸರ ಶ್ಲಾಘಿಸಿದರು.

ಈ ಕೆರೆ ಪಕ್ಷಿ ಸಂಕುಲಕ್ಕೆ ಆಶ್ರಯ ತಾಣ. ಕೆರೆ ಸುತ್ತಲಿನ 1250 ಎಕರೆ ಅರಣ್ಯ ದಾವಣಗೆರೆ-ಹರಿಹರದ ಆಮ್ಲಜನಕ ಕೇಂದ್ರ, ಬಯಲು ಸೀಮೆಯ ಹಸಿರು ಜಯಸಿಸ್, ಹರಿಹರ ತಾಲ್ಲೂಕು ಪಂಚಾಯಿತಿ ಜೀವವೈವಿಧ್ಯ ಸಮಿತಿ ಕೊಂಡಜ್ಜಿ ಕೆರೆ - ಅರಣ್ಯವನ್ನು ಗುರುತಿಸಿ ಪಾರಂಪರಿಕ ತಾಣ ಎಂದು ನಿರ್ಣಯ ಕೈಗೊಳ್ಳಬೇಕು ಎಂದರು.

**ಪಾಲಿಕೆ ವ್ಯಾಪ್ತಿಯಲ್ಲಿ ವನೀಕರಣ ಕಾರ್ಯ ಚುರುಕುಗೊಳ್ಳಲಿ:** ದಾವಣಗೆರೆ ನಗರ ವ್ಯಾಪ್ತಿಯಲ್ಲಿ ಇರುವ 200 ಪಾರ್ಕುಗಳಲ್ಲಿ ಫಲವೃಕ್ಷಗಳನ್ನು ನೆಡಲು ವಿಶೇಷ ಯೋಜನೆ ಜಾರಿ ಮಾಡಬೇಕು ಎಂದು ಅನಂತ ಹೆಗಡೆ ಆಶೀಸರ ಹೇಳಿದರು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮಹಾನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ್‌ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಹಾನಗರ ಪಕ್ಷಿ ಸಂಕುಲಕ್ಕೆ ಆಶ್ರಯ ನೀಡಿರುವ ವೃಕ್ಷ ಸಮೂಹ ಗುರುತಿಸಿ ಪಾರಂಪರಿಕ ವೃಕ್ಷಗಳು ಎಂದು ಮಾನ್ಯತೆ ನೀಡಬೇಕು ಎಂದು ತಿಳಿಸಿದರು.

ಸ್ಮಾರ್ಟ್‌ಸಿಟಿ ಯೋಜನೆಯಲ್ಲಿ ಗ್ರೀನ್ ಸಿಟಿ ತತ್ವ ಅಳವಡಿಸಬೇಕು. ಕೆರೆ ಅಭಿವೃದ್ಧಿಯಲ್ಲಿ ಅತಿಯಾದ ಕಾಂಕ್ರಿಟೀಕರಣ ಕಾಮಗಾರಿ ಸಾಧು ಅಲ್ಲ ಎಂಬ ಒಟ್ಟಾಭಿಪ್ರಾಯ ಮಹಾನಗರ ಪಾಲಿಕೆಯ ಜೀವವೈವಿಧ್ಯ ಸಮಿತಿ ಸಭೆಯಲ್ಲಿ ವ್ಯಕ್ತವಾಯಿತು.

ನಗರದ ಹೋಟೆಲ್, ಕಲ್ಯಾಣ ಮಂಟಪ, ಹಾಸ್ಟೆಲ್‌ಗಳ ಅಡುಗೆ ತ್ಯಾಜ್ಯದಿಂದ ಬಯೋಗ್ಯಾಸ್ ತಯಾರಿಸುವ ಯೋಜನೆ ಜಾರಿ ಮಾಡಬೇಕು. ಪಾಲಿಕೆ ಈ ಬಗ್ಗೆ ಅಗತ್ಯ ಕ್ರಮಕ್ಕೆ ಮುಂದಾಗಬೇಕು ಎಂದು ನಿರ್ಣಯಿಸಲಾಯಿತು.

ಪಾಲಿಕೆ ಕಮೀಷನರ್ ವಿಶ್ವನಾಥ್ ಮುದಜ್ಜಿ, ಜೀವವೈವಿಧ್ಯ ಸಮಿತಿ ಸದಸ್ಯರು, ಪರಿಸರ ಸಂಸ್ಥೆಗಳ ಸದಸ್ಯರು, ಜಿಲ್ಲೆಯ ನಗರ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

# ಹಕ್ಕಿಜ್ವರ : ಜಿಲ್ಲೆಗಳಲ್ಲಿ ಕಟ್ಟೆಚ್ಚರ

ಬೆಂಗಳೂರು, ಜ. 6 - ಕೇರಳದ ಕೊಟ್ಟಾಯಂ, ಆಲಪ್ಪುಳ ಜಿಲ್ಲೆಗಳಲ್ಲಿ ಬಾತು ಕೋಳಿಗಳಲ್ಲಿ ಹಕ್ಕಿ ಜ್ವರದ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಹೈ ಅಲರ್ಟ್‌ಗೆ ಸೂಚನೆ ನೀಡಲಾಗಿದೆ ಎಂದು ಪಶುಸಂಗೋ ಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

ಹಕ್ಕಿ ಜ್ವರದ ಸೋಂಕು ರಾಜ್ಯದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯಿರುವುದರಿಂದ ಸೋಂಕು ಹರಡದಂತೆ ಎಲ್ಲಾ ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳುವಂತೆ ಪಶುಸಂಗೋಪನಾ ಇಲಾಖೆ ಅಧಿಕಾರಿಗಳು ಹಾಗೂ ವೈದ್ಯರಿಗೆ ಸೂಚಿಸಿರುವುದಾಗಿ ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹಕ್ಕಿ ಜ್ವರದ ಸರ್ವೇಕ್ಷಣಾ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ, ಕೇರಳಕ್ಕೆ ಹೊಂದಿಕೊಂಡಿರುವ ರಾಜ್ಯದ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ ಜಿಲ್ಲೆಗಳ ಉಪನಿರ್ದೇಶಕರಿಗೆ ಹಕ್ಕಿ ಜ್ವರದ ಸಂಭಾವ್ಯ ಹರಡುವಿಕೆ ತಡೆಗಟ್ಟಲು ಸೂಚಿಸಲಾಗಿದೆ.

ಜಿಲ್ಲಾಧಿಕಾರಿಗಳೊಂದಿಗೆ ಜಿಲ್ಲಾ ಮಟ್ಟದಲ್ಲಿ ರೋಗ ನಿಯಂತ್ರಣ ಸಭೆ ನಡೆಸಿ ಸೂಕ್ತ ಮುಂಜಾಗ್ರತಾ ಕ್ರಮಕ್ಕೆ ನಿರ್ದೇಶನ ನೀಡಲಾಗಿದೆ.

ರಾಜ್ಯದಲ್ಲಿ ಈವರೆಗೂ ಹಕ್ಕಿ ಜ್ವರದ ಪ್ರಕರಣ ಕಂಡು ಬಂದಿಲ್ಲ, ಆದರೂ ಅಗತ್ಯ ಮುನ್ನೆಚ್ಚರಿಕೆಗೆ ಸೂಚಿಸಲಾಗಿದೆ. ಕೇರಳ ಗಡಿ ಭಾಗದಲ್ಲಿ ಕೂಡಲೇ ಚೆಕ್‌ಪೋಸ್ಟ್ ಸ್ಥಾಪಿಸಿ ಆ ರಾಜ್ಯದಿಂದ ಬರುವ ಕುಕ್ಕುಟ ಉತ್ಪನ್ನಗಳ ಸಾಗಾಣಿಕೆಯನ್ನು ನಿರ್ಬಂಧಿಸುವಂತೆ ಸೂಚಿಸಲಾಗಿದೆ.

ಕೇರಳದಿಂದ ರಾಜ್ಯಕ್ಕೆ ಬರುವ ಕೋಳಿ ಸಾಗಾಣಿಕೆ ವಾಹನಗಳನ್ನು ಶುದ್ಧಗೊಳಿಸಿ ಒಳಬಿಡಲು ಸೂಚಿಸಲಾಗಿದೆ ಎಂದರು.

ಈ ಸಂಬಂಧ ತೆಗೆದುಕೊಂಡ ಕ್ರಮಗಳ ವರದಿಯನ್ನು ಆಯಾ ಉಪ ನಿರ್ದೇಶಕರು, ಕೋಳಿ ರೋಗ ನಿರ್ಣಯ ಪ್ರಯೋಗ ಕಚೇರಿಗೆ ಸಲ್ಲಿಸಬೇಕು.

ಗಡಿ ಜಿಲ್ಲೆಗಳಲ್ಲಿ ಪ್ರತೀ ವಾರ ನಿಯಮಿತವಾಗಿ ಕುಕ್ಕುಟ ಕ್ಷೇತ್ರಗಳಿಂದ ಐದು ಮಾದರಿಗಳನ್ನು ಸಂಗ್ರಹಿಸಿ ಮುಂದಿನ ಆದೇಶದವರೆಗೂ ಬೆಂಗಳೂರಿನಲ್ಲಿರುವ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ ಪ್ರಯೋಗಾಲಯಕ್ಕೆ ವಿಶ್ಲೇಷಣೆಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ಎಲ್ಲಾ ಜಿಲ್ಲೆಗಳ ಕುಕ್ಕುಟ ಕ್ಷೇತ್ರಗಳಲ್ಲಿ ಪಕ್ಷಿಧಾಮ, ನೀರು ಸಂಗ್ರಹಣಾ ಸ್ಥಳಗಳ ಮೇಲೆ ಹೆಚ್ಚಿನ ನಿಗಾವಹಿಸಬೇಕು, ಕೋಳಿಗಳು, ವಲಸೆ ಹಕ್ಕಿಗಳು ಮರಣ ಹೊಂದಿದರೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಬೇಕು ಹಾಗೂ ಪ್ರಯೋಗಾಲಯಕ್ಕೆ ವರದಿ ಮಾಡಬೇಕು, ಜೊತೆಗೆ ಜೈವಿಕ ಸುರಕ್ಷತಾ ಕ್ರಮಕೈಗೊಳ್ಳಲು ಸೂಚಿಸಲಾಗಿದೆ ಎಂದು ತಿಳಿಸಿದರು.

## ನಗರಕ್ಕೆ ಇಂದು ಡಿಸಿಎಂ ಕಾರಜೋಳ



ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆ ಸಚಿವ ಗೋವಿಂದ ಎಂ.ಕಾರಜೋಳ ಅವರು ಇಂದು ನಗರಕ್ಕಾಗ ಮಿಸಲಿದ್ದು, ಬೆಳಿಗ್ಗೆ 9 ಕ್ಕೆ ದಾವ ಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ವಿವಿಧ ಕಾಮ ಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು.

ನಂತರ ಬೆಳಿಗ್ಗೆ 11.30ಕ್ಕೆ ಹರಿಹರದಲ್ಲಿ ನಡೆಯುವ ಸಮಾರಂಭವೊಂದರಲ್ಲಿ ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಬಾಗಲಕೋಟೆಗೆ ಪ್ರಯಾಣ ಬೆಳೆಸುವರು.

## ಗುಂಡೂರಾವ್ ಪತ್ನಿ ನಿಧನ

ಬೆಂಗಳೂರು, ಜ.6-ಮಾಜಿ ಮುಖ್ಯಮಂತ್ರಿ ದಿವಂಗತ ಗುಂಡೂರಾವ್ ಪತ್ನಿ ಹಾಗೂ ಶಾಸಕ ದಿನೇಶ್ ಗುಂಡೂರಾವ್ ಅವರ ತಾಯಿ ವರಲಕ್ಷ್ಮೀ ಗುಂಡೂರಾವ್ (80) ಅವರು ನಿಧನರಾಗಿದ್ದಾರೆ.

ವರಲಕ್ಷ್ಮಿ ಗುಂಡೂರಾವ್ ನಿಧನಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಂತಾಪ ಸೂಚಿಸಿದ್ದಾರೆ.

## ಲವ್ ಜಿಹಾದ್ ನಿಷೇಧ ಕಾಯ್ದೆ ಜಾರಿ ಖಚಿತ

ಬೆಂಗಳೂರು, ಜ. 6 - ಲವ್ ಜಿಹಾದ್ ನಿಷೇಧ ಕಾಯ್ದೆಯನ್ನು ಜಾರಿಗೆ ತರುವುದು ನಿಶ್ಚಿತ. ಈ ವಿಚಾರದಲ್ಲಿ ಯಾವುದೇ ಹಿಂಜರಿಕೆ ಇಲ್ಲ ಎಂದು ಜವಳಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಶ್ರೀಮಂತ ಬಾಳ ಸಾಹೇಬ ಪಾಟೀಲ್ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿಂದು ಇಲಾಖಾ ಅಭಿವೃದ್ಧಿ ಸಂಬಂಧಿ ಪುಸ್ತಕ ಬಿಡುಗಡೆ ಮಾಡಿ ಮಾತ ನಾಡಿದ ಅವರು, ಲವ್ ಜಿಹಾದ್ ನಿಷೇಧ ಕಾಯ್ದೆ ಹೆಚ್ಚು ವಿಸ್ತಾರವಾದ ವಿಷಯವಾಗಿದ್ದು ಕಾನೂನು ಇಲಾಖೆ ಪರಿಶೀಲನೆಯಲ್ಲಿದೆ ಎಂದರು.

ಕಾಯ್ದೆ ಅಧ್ಯಯನ ಬಳಿಕ ಸಮಾಜದ ಮುಖಂಡರೊಂದಿಗೆ ಸಮಾಲೋಚಿಸಿ ನಂತರ ಸಚಿವ ಸಂಪುಟದಲ್ಲಿ ಚರ್ಚಿಸಿ ಜಾರಿಗೊಳಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ರಾಜ್ಯದ ಮದರಸಾಗಳಲ್ಲಿ ಧಾರ್ಮಿಕ ಶಿಕ್ಷಣದ ಜೊತೆಗೆ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ಪಠ್ಯಕ್ರಮವನ್ನೂ ಬೋಧಿಸಲು ಉದ್ದೇಶಿಸಲಾಗಿದೆ. ಮದರಸಾಗಳಲ್ಲಿ ಪಡೆಯುವ ಶಿಕ್ಷಣವನ್ನು ಎಸ್ಸೆಸ್ಸೆಲ್ಸಿಗೆ ತತ್ಸಮಾನವೆಂದು ಪರಿಗಣಿಸಲಾಗುತ್ತದೆ, ಮದರಸಾಗಳಲ್ಲಿ ಶಿಕ್ಷಣ ಪಡೆದು ಹೊರಬರುವ ವಿದ್ಯಾರ್ಥಿಗಳಿಗೆ ಐಟಿಐನಂತಹ ಕೌಶಲ್ಯ ಆಧಾರಿತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಅವಕಾಶ ಮಾಡಿಕೊಡಲಾಗುವುದು ಎಂದರು.

ವಿವಿಧ ಕಾರಣಗಳಿಗಾಗಿ ಸಚಿವ ಸಂಪುಟ ವಿಸ್ತರಣೆ ವಿಳಂಬವಾಗಿದೆ, ಕೋವಿಡ್‌ನಿಂದಾಗಿ ರಾಜ್ಯದಲ್ಲಿ ಹಣಕಾಸಿನ ಕೊರತೆಯಾಗಿದೆ ಎಂದರು.

# ಕೇಂದ್ರದ ಕೃಷಿ ನೀತಿಯಿಂದ ರೈತರ ಬದುಕು ದುಸ್ತರ




### 'ಕೃಷಿ ಬಿಕ್ಕಟ್ಟು ಮತ್ತು ಸವಾಲುಗಳು' ಸಂವಾದ ಗೋಷ್ಠಿಯಲ್ಲಿ ಸತೀಶ್ ಜಾರಕಿಹೊಳಿ

ಹರಪನಹಳ್ಳಿ, ಜ.6- ದೇಶದ ಕೃಷಿ ವಲಯ ತೀವ್ರ ಸಂಕಷ್ಟದಲ್ಲಿದ್ದು ಆಳುವ ಸರ್ಕಾರ ರೈತರ ಹಾಗು ಕೃಷಿ ಸಂಬಂಧಿ ಕಾರ್ಮಿಕರ ಹಿತ ಕಾಯುವ ಕಾಯ್ದೆ ರೂಪಿಸುವುದು ಬಿಟ್ಟು, ಕೃಷಿ ವಲಯವನ್ನೇ ಕಾರ್ಪೊರೇಟ್ ಜಗತ್ತಿಗೆ ಒತ್ತೆ ಇಡುವುದರಲ್ಲಿ ಉತ್ಸಾಹ ತೋರುತ್ತಿದೆ ಎಂದು ಮಾನವ ಬಂಧುತ್ವ ವೇದಿಕೆಯ ಸಂಸ್ಥಾಪಕ ಸತೀಶ್ ಜಾರಕಿಹೊಳಿ ಆರೋಪಿಸಿದರು

ಪಟ್ಟಣದ ತೆಗ್ಗಿನಮಠದ ಟಿ.ಎಂ.ಎ.ಇ ಸಭಾಂಗಣದಲ್ಲಿ 'ಕೃಷಿ ಬಿಕ್ಕಟ್ಟು ಮತ್ತು ಸವಾಲುಗಳು' ಎಂಬ ವಿಷಯದ ಬಗ್ಗೆ ಜರುಗಿದ ಸಂವಾದ ಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಕೃಷಿ ವಲಯದಲ್ಲಿ ಆಗುತ್ತಿರುವ ವ್ಯಾಪಾರೀಕರಣ ಮತ್ತು ಕೇಂದ್ರ ಸರ್ಕಾರ ತಂದಿರುವ ಕೃಷಿ ನೀತಿಯಿಂದ ರೈತರು ಜನಸಾಮಾನ್ಯರ ಬದುಕು ದುಸ್ತರವಾಗಿದೆ.

ಅವೈಜ್ಞಾನಿಕವಾಗಿ ಎ.ಪಿ.ಎಂ.ಸಿ ಕಾಯ್ದೆಯನ್ನು ತಂದು ಬಂಡವಾಳಶಾಹಿ ಅದಾನಿ, ಅಂಬಾನಿಗಳ ತಿಜೋರಿ ತುಂಬುವ ಕೆಲಸ ಮಾಡುತ್ತಿದೆ. ಇದನ್ನು ಪ್ರಶ್ನಿಸಿ ಗಡಿಯಲ್ಲಿ ರೈತರು ಹಲವು ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಪ್ರಧಾನಿ ಇದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತಿದ್ದಾರೆ. ಹೀಗಾಗಿ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಇಂತಹ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸರ್ಕಾರಕ್ಕೆ ಎಚ್ಚರ ನೀಡಬೇಕು ಎಂದರು.

ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಅನಂತನಾಯ್ಕ ಮಾತನಾಡಿ, ಕಳೆದ 8-10 ವರ್ಷಗಳಿಂದ ರಾಜ್ಯದಲ್ಲಿ ಮಾನವ ಬಂಧುತ್ವ ವೇದಿಕೆ ಚಟುವಟಿಕೆಯಲ್ಲಿದೆ, ಮೌಢ್ಯದ ವಿರುದ್ಧ ಜಾಗೃತಿ ಮೂಡಿಸಲು ಈ ವೇದಿಕೆ ಅಸ್ತಿತ್ವಕ್ಕೆ ಬಂದಿದೆ. ಇದು ಅರ್ಥಪೂರ್ಣವಾದ ಸಂವಾದ, ರೈತ ಚಳುವಳಿಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಾನವ ಬಂಧುತ್ವ ವೇದಿಕೆ ವೈಚಾರಿಕವಾದ ಜನಪರ ಚಳುವಳಿ ಮಾಡುತ್ತಲಿವೆ ಎಂದು ಹೇಳಿದರು.

ಈ ವೇಳೆ ರಾಜ್ಯ ರೈತ ಸಂಘದ ಎಚ್.ಎಂ. ಮಹೇಶ್ವರಸ್ವಾಮಿ, ವಿವಿಧ ಸಂಘಟನೆಯ ಮುಖಂಡರಾದ ಆಲದಹಳ್ಳಿ ಷಣ್ಮುಖಪ್ಪ, ಗುಡಿಹಳ್ಳಿ ಹಾಲೇಶ್, ಕಬ್ಬಳ್ಳಿ ಮೈಲಪ್ಪ, ಅಲಗಿಲವಾಡದ ವಿಶ್ವನಾಥ್, ಎಚ್.ಎಂ. ಸಂತೋಷ್, ಗೋಣೆಪ್ಪ, ರಮೇಶನಾಯ್ಕ ನಿವೃತ್ತ ಉಪನ್ಯಾಸಕ ತಿಮ್ಮಪ್ಪ 'ಕೃಷಿ ಬಿಕ್ಕಟ್ಟು ಮತ್ತು ಸವಾಲುಗಳು' ಎಂಬ ವಿಷಯದ ಬಗ್ಗೆ ಮಾತನಾಡಿದರು.

ಮಾನವ ಬಂಧುತ್ವ ವೇದಿಕೆಯ ಜಿಲ್ಲಾ ಸಂಚಾಲಕ ಇರ್ಫಾನ್ ಮುದಗಲ್, ತಾಲ್ಲೂಕು ಸಂಚಾಲಕ ಟಿ. ಮಂಜುನಾಥ್, ಪುರಸಭೆ ಮಾಜಿ ಅಧ್ಯಕ್ಷ ಎಚ್.ಕೆ. ಹಾಲೇಶ್, ಕೆ.ಪಿ.ಎಸ್.ಇ ಮಾಜಿ ಸದಸ್ಯ ಚಂದ್ರಶೇಖರಪ್ಪ, ನೀಲಗುಂದ ಜಿಲ್ಲಾ ಪಂಚಾಯಿತಿ ಸದಸ್ಯ ಎಚ್.ಬಿ. ಪರಶುರಾಮಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ರಾಜಪ್ಪ, ಟಿ.ಎ.ಪಿ.ಸಿ.ಎಂ.ಎಸ್ ಅಧ್ಯಕ್ಷ ಪಿ. ಪ್ರೇಮಕುಮಾರ್, ಪುರಸಭೆ ಸದಸ್ಯ ಲಾಟಿ ದಾದಾಪೀರ್, ಮುಖಂಡರಾದ ಎಂ.ಟಿ. ಸುಭಾಷ್ಚಂದ್ರ, ಯರಬಳ್ಳಿ ಉಮಾಪತಿ, ಅರಸಿಕೇರಿಯ ವೈ.ಡಿ.ಅಣ್ಣಪ್ಪ, ಸವಣೂರು ರಾಜಶೇಖರ್, ನಿವೃತ್ತ ಉಪನ್ಯಾಸಕ ಎಂ. ಗಂಗಪ್ಪ, ಕಂಚಿಕೇರಿ ಜಯಲಕ್ಷ್ಮಿ, ಗುತ್ತಿಗೆದಾರರಾದ ಬಾಣದ ಅಂಜಿನಪ್ಪ, ಟಿ.ಉಮಾಕಾಂತ್, ಬಿ.ವಾಗೀಶ್, ಕೆ.ಗಣೇಶ್, ಕೆ.ಯೋಗೇಶ್, ದುಗ್ಗಾವತಿ ಮಂಜುನಾಥ್, ರವಿನಾಯ್ಕ, ಪಿ.ಅರುಣಕುಮಾರ್ ಸೇರಿದಂತೆ ಇತರರು ಇದ್ದರು.

# ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಬದ್ಧ

### ಮುಖ್ಯಮಂತ್ರಿ ಯಡಿಯೂರಪ್ಪ

ಬೆಂಗಳೂರು, ಜ. 6 - ಸಾಮಾಜಿಕ ಹಾಗೂ ಆರ್ಥಿಕ ವಾಗಿ ಹಿಂದುಳಿದಿರುವ ಬ್ರಾಹ್ಮಣ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಹೇಳಿದ್ದಾರೆ.

ವಿಧಾನಸೌಧದಲ್ಲಿಂದು ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಯೋಜನೆಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬ್ರಾಹ್ಮಣ ಸಮುದಾಯದವರು ಶೈಕ್ಷಣಿಕವಾಗಿ ಬುದ್ಧಿವಂತರಾಗಿದ್ದರೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಈ ಸಮುದಾಯವನ್ನು ಮೇಲೆತ್ತಲು ಸರ್ಕಾರ ಬದ್ಧವಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರ ಇನ್ನಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ಆಶ್ವಾಸನೆ ನೀಡಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಬ್ರಾಹ್ಮಣರು ಹುಟ್ಟುತ್ತಲೇ ಗಳಿಸುವುದಿಲ್ಲ. ಪರಿಶ್ರಮ ವಹಿಸಿ ಮೇಲಕ್ಕೆ ಬಂದಿದ್ದೇವೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದೇವೆ ಎಂದರು.

## ಮತಾಂತರ ನಿರ್ಬಂಧ ಕಾಯ್ದೆಗಳ ಪರಿಶೀಲನೆಗೆ ಸುಪ್ರೀಂ ಅಸ್ತು

ನವದೆಹಲಿ, ಜ. 6 – ಉತ್ತರ ಪ್ರದೇಶ ಹಾಗೂ ಉತ್ತರಾಖಂಡಗಳು ಅಂತರಧರ್ಮೀಯ ವಿವಾಹಗಳ ಹಿನ್ನೆಲೆಯಲ್ಲಿ ಮತಾಂತರವಾಗುವುದರ ಮೇಲೆ ನಿರ್ಬಂಧ ಹೇರುವ ಕಾಯ್ದೆ ರೂಪಿಸಿರುವುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ವಿಚಾರಣೆಗೆ ಸಮ್ಮತಿಸಿದೆಯಾದರೂ, ಎರಡು ರಾಜ್ಯಗಳು ಜಾರಿಗೆ ತಂದಿರುವ ಕಾಯ್ದೆಗಳನ್ನು ತಡೆಯಲು ನಿರಾಕರಿಸಿದೆ.

ವಕೀಲ ವಿಶಾಲ್ ಠಾಕ್ರೆ ಹಾಗೂ ಇತರರು ಮತ್ತು ಸರ್ಕಾರೇತರ ಸಂಘಟನೆಯಾದ ಜಸ್ಟೀಸ್ ಅಂಡ್ ಪೀಸ್‌ಗಳು ಮತಾಂತರ ನಿರ್ಬಂಧಗಳನ್ನು ಪ್ರಶ್ನಿಸಿ ಅರ್ಜಿ ದಾಖಲಿಸಿವೆ.

## ಮೇ-ಜೂನ್‌ನಲ್ಲಿ ಪಿಯು, ಎಸ್ಸೆಸ್ಸೆಲ್ಸಿ ಪರೀಕ್ಷೆ

ಬೆಂಗಳೂರು, ಜ. 6 - ರಾಜ್ಯದಲ್ಲಿ ಮೇ ಎರಡನೇ ವಾರದಲ್ಲಿ ದ್ವಿತೀಯ ಪಿಯು ಪರೀಕ್ಷೆಗಳು ನಡೆಯಲಿದ್ದು, ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಜೂನ್ ಮೊದಲ ವಾರದಿಂದ ಪ್ರಾರಂಭವಾಗಲಿವೆ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ದ್ವಿತೀಯ ಪಿಯು ಹಾಗೂ ಎಸ್.ಎಸ್.ಎಲ್.ಸಿ. ತರಗತಿಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ದೃಷ್ಟಿಯಿಂದ ಬೋಧನೆ, ಕಲಿಕೆಗಾಗಿ ಗುರ್ತಿಸಿರುವ ವಿಷಯಾಂಶಗಳನ್ನು ಅಂತಿಮಗೊಳಿಸಲಾಗಿದೆ ಎಂದು ಹೇಳಿದ್ದಾರೆ.

ಇದರ ವಿವರಗಳನ್ನು ಎಲ್ಲ ಶಾಲೆಗಳಿಗೆ ತಲುಪಿಸಲಾಗುತ್ತದೆ. ಯಾವುದೇ ವಿದ್ಯಾರ್ಥಿಗೂ ಹೊರೆಯಾಗದ ರೀತಿಯಲ್ಲಿ, ಆದರೆ ಕನಿಷ್ಟ ಕಲಿಕೆಗೆ ಬೋಧಿಸಬೇಕಿರುವ ಪಠ್ಯಗಳನ್ನು ಪರಿಗಣಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

# ಅಂಗನವಾಡಿ ಸ್ವಂತ ಕಟ್ಟಡಕ್ಕೆ ಶಾಸಕರ- ಸಂಸದರ ಅನುದಾನ ಬಳಸಿ : ಸಚಿವ ಕೆ.ಎಸ್. ಈಶ್ವರಪ್ಪ ಸಲಹೆ

ದಾವಣಗೆರೆ ಜ.6- ಗ್ರಾಮೀಣ ಭಾಗದಲ್ಲಿ ಅಂಗನವಾಡಿ ಕೇಂದ್ರಗಳನ್ನು ಸ್ವಂತ ಕಟ್ಟಡದಲ್ಲಿ ನಡೆಸಬೇಕು. ಈ ಬಗ್ಗೆ ಶಾಸಕರು ಮತ್ತು ಎಂಪಿ ಅವರು ತಮ್ಮ ಅನುದಾನದಲ್ಲಿ ಅಥವಾ ಇನ್ನಿತರೆ ಅನುದಾನದಲ್ಲಿ ಸ್ವಂತ ಕಟ್ಟಡ ಹೊಂದುವ ಬಗ್ಗೆ ಕ್ರಮ ವಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ. ಎಸ್. ಈಶ್ವರಪ್ಪ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಮುಖ್ಯ ಸಭಾಂಗಣದಲ್ಲಿ ಇಂದು ಸಂಜೆ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಪಂಚಾಯತ್ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡುತ್ತಾ, ನರೇಗಾ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ತಲಾ ರೂ.5 ಲಕ್ಷ ಮ್ಯಾಚಿಂಗ್ ಗ್ರಾಂಟ್‌ನಲ್ಲಿ ಕಟ್ಟಡ ನಿರ್ಮಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ವಿಜಯಕುಮಾರ್ ಗೆ ತಾಕೀತು ಮಾಡಿದರು.



250 ಅಂಗನವಾಡಿ ಕೇಂದ್ರಗಳ ರಿಪೇರಿ ಕೆಲಸಕ್ಕೆ ಪಿಆರ್‌ಇಡಿ ಅವರು ಜನವರಿ ಬಂದರೂ ಎಸ್ಟಿಮೇಟ್ ಸಿದ್ದಪಡಿಸಿಲ್ಲ. ಯಾಕಿಷ್ಟು ವಿಳಂಬ ಮಾಡಿದ್ದೀರಾ?. ಇನ್ನು ಒಂದು ತಿಂಗಳ ಒಳಗೆ ಈ 250 ಅಂಗನವಾಡಿ ಕೇಂದ್ರಗಳನ್ನು ರಿಪೇರಿ ಮಾಡಬೇಕು ಎಂದು ಗಡುವು ನೀಡಿದರು.

ವಿಜಯಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 1723 ಅಂಗನವಾಡಿ ಕೇಂದ್ರಗಳಿದ್ದು ನಗರದಲ್ಲಿ 344 ಮತ್ತು ಗ್ರಾಮೀಣ ಭಾಗದಲ್ಲಿ 1379 ಕೇಂದ್ರಗಳಿವೆ. ಈ ಪೈಕಿ ನಗರದಲ್ಲಿ 53 ಮತ್ತು ಗ್ರಾಮೀಣ ಭಾಗದಲ್ಲಿ 253 ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಪ್ರಸಕ್ತ ಸಾಲಿನಲ್ಲಿ 250 ಸ್ವಂತ ಕಟ್ಟಡಗಳಿಗೆ ತಲಾ ರೂ.50 ಸಾವಿರ ವೆಚ್ಚದಲ್ಲಿ ರಿಪೇರಿ ಕೆಲಸಕ್ಕೆ ಪಿಆರ್‌ಇಡಿಗೆ ಆದೇಶಿಸಲಾಗಿದೆ ಎಂದು ಮಾಹಿತಿ ನೀಡಿದರು.

ಶಾಲಾ ಮಕ್ಕಳಿಗೆ ನಲ್ಲಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕಾರ್ಯಪಾಲಕ ಅಭಿಯಂತರರ ಜೊತೆ ಸಹಕರಿಸುವಂತೆ ಡಿಡಿಪಿಐಗೆ ಸೂಚಿಸಿದರು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಹರಿಹರ ಮತ್ತು ಜಗಳೂರಿನಲ್ಲಿ ಪ್ರಗತಿ ಕಡಿಮೆ ಆಗಿದ್ದು, ನಿಗದಿತ ಗುರಿ ಸಾಧಿಸಲು ಕ್ರಮ ವಹಿಸಬೇಕೆಂದರು.

# ಕಾಂಗ್ರೆಸ್ ನಾಟಕ ದಲಿತರಿಗೆ ಗೊತ್ತಾಗಿದೆ

ದಾವಣಗೆರೆ, ಜ.6- ಅಭಿವೃದ್ಧಿ ಹೆಸರೇಳುತ್ತಾ ಓಟ್ ಬ್ಯಾಂಕ್ ಗೆ ಮಾತ್ರ ತಮ್ಮನ್ನು ಬಳಕೆ ಮಾಡಿಕೊಳ್ಳುತ್ತಾ ಬಂದಿರುವ ಕಾಂಗ್ರೆಸ್‌ನ ಮೊಸಳೆ ಕಣ್ಣೀರಿನ ನಾಟಕ ದಲಿತರಿಗೆ ಗೊತ್ತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಹೇಳಿದರು.

ಇಲ್ಲಿನ ಸೋಮೇಶ್ವರ ವಿದ್ಯಾಲಯದಲ್ಲಿ ಇಂದು ಏರ್ಪಾಡಾಗಿದ್ದ ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾಂಗ್ರೆಸ್ ನಾಟಕ ತಿಳಿದ ಅಲ್ಪಸಂಖ್ಯಾತರು, ಹಿಂದುಳಿದವರು ಕಾಂಗ್ರೆಸ್ ಕೈ ಬಿಟ್ಟಿದ್ದಾರೆ. ಬಿಜೆಪಿ ಮೇಲೆ ವಿಶ್ವಾಸ ಬಂದಿದೆ. ಎಸ್ಸಿ ಜನಾಂಗದ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.



ಪರಿಶಿಷ್ಟ ಜಾತಿ, ಪಂಗಡದ ಹೆಸರೇಳಿ ಅವರ ಓಟು ಪಡೆದು, ಮುಂದೆಯೂ ಅವರ ಓಟುಗಳಿಗಾಗಿ ಅವರನ್ನು ಶಿಕ್ಷಣ ವಂಚಿತರನ್ನಾಗಿಯೇ ಮಾಡಿದ್ದು ಕಾಂಗ್ರೆಸ್. ಹಿಂದುಳಿದ ವರ್ಗ ಶಿಕ್ಷಣ ಪಡೆದು ವಿದ್ಯಾವಂತರಾದರೆ, ಉದ್ಯೋಗ ಪಡೆದರೆ ಮುಂದೆ ತಮ್ಮ ಮತ ಬ್ಯಾಂಕ್ ಗೆ ತೊಂದರೆಯಾಗುತ್ತದೆ ಎನ್ನುವ ಮನೋಭಾವದಿಂದ ಕೇವಲ ಆಸೆ ತೋರಿಸುತ್ತಾ ಪರಿಶಿಷ್ಟರಿಗೆ ಅವಮಾನ ಮಾಡುತ್ತಾ ಬಂದಿದೆ ಎಂದರು.

ಆದರೆ ಪ್ರಧಾನಿ ಮೋದಿ 60 ಸಾವಿರ ಕೋಟಿ ರೂ.ಗಳ ವಿದ್ಯಾರ್ಥಿ ವೇತನ ನೀಡಿ ಹಿಂದುಳಿದವರ ಶಿಕ್ಷಣಕ್ಕೆ ಆದ್ಯತೆ ನೀಡಿದ್ದಾರೆ. ಹಲವಾರು ಯೋಜನೆಗಳ ಮೂಲಕ ಅವರ ಉದ್ಧಾರಕ್ಕೆ ಶ್ರಮಿಸುತ್ತಿದ್ದಾರೆ ಎಂದರು. ನೀಟ್ ಮೂಲಕ ಎಲ್ಲಾ ವರ್ಗದವರೂ ಮೆಡಿಕಲ್ ಕಾಲೇಜು ಮೆಟ್ಟಿಲು ಹತ್ತಬಹುದು ಎಂದು ರಾಜ್ಯ ಸರ್ಕಾರ ತೋರಿಸಿಕೊಟ್ಟಿದೆ ಎಂದರು.

ಅಸ್ಪೃಶ್ಯತೆಯಿಂದ ನೋವುಂಡಿದ್ದ ಅಂಬೇಡ್ಕರ್ ಎಲ್ಲರಿಗೂ ನ್ಯಾಯ ಸಿಗಬೇಕೆಂಬ ಉದ್ದೇಶದಿಂದ ಸಂವಿಧಾನ ರಚಿಸಿದರು. ಅಂತಹ ಸಂವಿಧಾನದ ಕಾರಣದಿಂದಲೇ ಚಹಾ ಮಾರುವ ಓರ್ವ ಹುಡುಗ ಇಂದು ಪ್ರಧಾನಿಯಾಗಲು ಸಾಧ್ಯವಾಗಿದೆ. ನಮ್ಮಂತ ಅನೇಕರು ರಾಜಕಾರಣಕ್ಕೆ ಬರಲು ಸಾಧ್ಯವಾಗಿದೆ ಎಂದರು.

## ಸಾರ್ವಜನಿಕ ನೋಟಿಸ್

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷಿದಾರರಾದ **ಶ್ರೀಮತಿ ಪಿ.ಆರ್. ಅನಿತಾ ಕೋಂ ಬಿ.ಎಂ. ದೇವೇಂದ್ರಪ್ಪ**, ವಯಸ್ಸು 38 ವರ್ಷ, ಮನೆಕೆಲಸ, ಲಿಂಗಾಯಿತ ಜನಾಂಗ, ವಾಸ ಯಕ್ಕೆಗೊಂದಿ, ಸಿದ್ದನಮಠ ಪೋಸ್ಟ್, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ನೀಡಿದ ಮಾಹಿತಿ ಮೇರೆಗೆ
ನಮ್ಮ ಕಕ್ಷಿದಾರರ ತಂದೆ ದಿವಂಗತ **ಪಾಮೇನಹಳ್ಳಿ ರೇವಣಸಿದ್ದಪ್ಪ ಬಿನ್ ಚನ್ನಬಸಪ್ಪ** ಇವರಿಗೆ ಸೇರಿದ ಆವರಗೆರೆ ಗ್ರಾಮದ **ರಿ.ಸ.ನಂ.192/1ಬಿ1 ರಲ್ಲಿ ವಿಸ್ತೀರ್ಣ 2ಎಕರೆ** ಹಾಗೂ ಅದೇ ಗ್ರಾಮದ **ರಿ.ಸ.ನಂ.193/3ಪಿ2 ರಲ್ಲಿ ವಿಸ್ತೀರ್ಣ 11 ಗುಂಟೆ,** ಜಮೀನುಗಳು ಇರುತ್ತವೆ. ನಮ್ಮ ಕಕ್ಷಿದಾರರ ಸಹೋದರ **ಬಸವರಾಜ ಬಿನ್ ಪಾಮೇನಹಳ್ಳಿ ರೇವಣಸಿದ್ದಪ್ಪ** ಇವರು ನಮ್ಮ ಕಕ್ಷಿದಾರರಿಗೆ ಹಣ ನೀಡುತ್ತೇನೆಂದು ಹೇಳಿ ದಾವಣಗೆರೆ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ದಿನಾಂಕ 24.12.2020 ರಂದು ಹಕ್ಕು ಬಿಡುಗಡೆ ಪತ್ರವನ್ನು ಮಾಡಿಸಿಕೊಂಡಿದ್ದು, ಪತ್ರವಾದ ನಂತರ ಹಣ ನೀಡದೇ ಮೋಸ ಮಾಡಿ ನಂಬಿಕೆ ದ್ರೋಹ ಮಾಡಿರುತ್ತಾರೆ. ಸದರಿ ಬಸವರಾಜಪ್ಪ ಹಾಗೂ ಹಣ ನೀಡುತ್ತೇವೆಂದು ಹೇಳಿದ ನಮ್ಮ ಕಕ್ಷಿದಾರರ ಸಂಬಂಧಿ ಆವರಗೆರೆಯ ಕರಿಬಸಪ್ಪ ಬಿನ್ ಶರಣಪ್ಪ ಇವರುಗಳ ಮೇಲೆ ನಮ್ಮ ಕಕ್ಷಿದಾರರು ಕಾನೂನು ಕ್ರಮ ಜರುಗಿಸುವವರಿದ್ದು, ಮೇಲ್ಕಂಡ ಆಸ್ತಿಯ ಬಗ್ಗೆ ಯಾರಾದರೂ ವ್ಯವಹರಿಸಿದಲ್ಲಿ ಅಂದರೆ ಕ್ರಯ, ಅಡಮಾನ, ಭೋಗ್ಯ ಮಾಡಿಕೊಳ್ಳದಂತೆ ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಈ ಸಾರ್ವಜನಿಕ ತಿಳುವಳಿಕೆ ಪ್ರಕಟಗೊಂಡ ನಂತರವೂ ಕ್ರಯ, ಅಡಮಾನ, ಭೋಗ್ಯ ಮಾಡಿಕೊಂಡಲ್ಲಿ ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿಯಿಂದ ಭಾದಿತವಾಗುವುದಿಲ್ಲ. ನಮ್ಮ ಕಕ್ಷಿದಾರರು ಸದರಿ ಹಕ್ಕು ಬಿಡುಗಡೆ ಪತ್ರ ರದ್ದು ಕೋರಿ ಮತ್ತು ಬಸವರಾಜ ಹಾಗೂ ಕರಿಬಸಪ್ಪ ಇವರು ಮಾಡಿರುವ ಮೋಸ ಮತ್ತು ನಂಬಿಕೆ ದ್ರೋಹಗಳಿಗೆ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ದಾಖಲಿಸುವವರಿರುತ್ತಾರೆ. ಆದ್ದರಿಂದ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

ಸಹಿ/-
**ಪ್ರಕಾಶ್ ಪಾಟೀಲ್,** ವಕೀಲರು
**ಸುಷ್ಮಾ ಪಾಟೀಲ್,** ವಕೀಲರು
ಮನೆ # 87/1, 7ನೇ ಕ್ರಾಸ್, ಅನ್ನಪೂರ್ಣ ನಿವಾಸ,
ಹೊಸ ಕೋರ್ಟ್ ಕಾಂಪ್ಲೆಕ್ಸ್ ಹಿಂಭಾಗ, ಎ' ಬ್ಲಾಕ್, ಶೀ ದೇವರಾಜ ಅರಸ್ ಬಡಾವಣೆ, ದಾವಣಗೆರೆ-577 006. **ಮೊ: 94483 58831**

ಸಹಿ/-
**ಪಿ.ಆರ್. ಅನಿತಾ**
ಕಕ್ಷಿದಾರರು




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte